ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಭಾನುವಾರ, ಮಾರ್ಚ್ 17, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 305 RNI : 27369/75

janathavani@mac.com
www.janathavani.com
08192 254736 91642 99999


## ಸರ್ಕಾರಿ ನೌಕರರ ವೇತನ ಶೇ.27.5 ಹೆಚ್ಚಳಕ್ಕೆ ಶಿಫಾರಸ್ಸು

ಬೆಂಗಳೂರು, ಮಾ. 16 - ರಾಜ್ಯದ 7ನೇ ವೇತನ ಆಯೋಗವು ಸಲ್ಲಿಸಿರುವ ವರದಿಯಲ್ಲಿ ಮೂಲವೇತನದಲ್ಲಿ ಶೇಕಡ 27.5ರಷ್ಟು ಹೆಚ್ಚಳ ಮಾಡಲು ಶಿಫಾರಸ್ಸು ಮಾಡಿದ್ದು, ವರದಿ ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ.ಸುಧಾಕರ ರಾವ್ ಅಧ್ಯಕ್ಷತೆಯ ಏಳನೇ ವೇತನ ಆಯೋಗದ ವರದಿ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ವೇತನ ಆಯೋಗದ ಅವಧಿಯನ್ನು ಮೂರು ತಿಂಗಳು ವಿಸ್ತರಿಸಲಾಗಿತ್ತು, ಅವಧಿಯು ಮಾರ್ಚ್ 15ರಂದು ಮುಕ್ತಾಯ ಗೊಂಡಿದ್ದು, ನಿನ್ನೆ ತಾವು ಮೈಸೂರಿನಲ್ಲಿದ್ದ ಕಾರಣ ವರದಿ ಸ್ವೀಕರಿಸಲು ಸಾಧ್ಯವಾಗಿರಲಿಲ್ಲ ಎಂದರು.

ಇಂದು ವರದಿ ಸ್ವೀಕರಿಸಲಾಗಿದೆ. ವರದಿಯಲ್ಲಿ ಕನಿಷ್ಠ ಮೂಲ ವೇತನವನ್ನು 17,000 ರೂ.ಗಳಿಂದ 27 ಸಾವಿರ ರೂ.ಗಳವರೆಗೆ ಹೆಚ್ಚಿಸುವಂತೆ ಶಿಫಾರಸ್ಸು ಮಾಡಲಾಗಿದೆ. ಇದರೊಂದಿಗೆ ಇನ್ನೂ ಅನೇಕ ಶಿಫಾರಸ್ಸಗಳಿದ್ದು ವರದಿಯನ್ನು ಆರ್ಥಿಕ ಇಲಾಖೆಗೆ ನೀಡಲಾಗಿದೆ.

ಆರ್ಥಿಕ ಇಲಾಖೆ ವರದಿಯನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ, ನೀಡುವ ಸಲಹೆಗಳ ಆಧಾರದಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

## ಜಮ್ಮು-ಕಾಶ್ಮೀರಕ್ಕಿಲ್ಲ ಚುನಾವಣೆ ಪಕ್ಷಗಳ ತೀವ್ರ ಅಸಮಾಧಾನ

ಶ್ರೀನಗರ, ಮಾ. 16 – ಲೋಕಸಭಾ ಚುನಾವಣೆಯ ಜೊತೆಗೆ ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶಕ್ಕೂ ಚುನಾವಣೆ ಘೋಷಣೆ ಮಾಡದೇ ಇರುವುದಕ್ಕೆ ರಾಜ್ಯದ ಪಕ್ಷಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ.

ಚುನಾವಣೆ ನಡೆಸದೇ ಜನರ ಪ್ರಜಾಸತ್ತಾತ್ಮಕ ಅಧಿಕಾರ ನಿರಾಕರಿಸಲಾಗುತ್ತಿದೆ ಎಂದು ಪಕ್ಷಗಳು ಹೇಳಿವೆ. ಆದರೆ, ರಕ್ಷಣಾ ಕಾರಣಗಳಿಂದಾಗಿ ಚುನಾವಣಾ ಆಯೋಗ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಬಿಜೆಪಿ ಸಮರ್ಥಿಸಿಕೊಂಡಿದೆ. ಲೋಕಸಭಾ ಚುನಾವಣೆಯ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ (2ನೇ ಪುಟಕ್ಕೆ)

# ಲೋಕಸಭಾ ಸಮರ: ರಾಜ್ಯದಲ್ಲಿ ಏ.26, ಮೇ 7ರಂದು

## ಮೊದಲ ಹಂತದಲ್ಲಿ ದಕ್ಷಿಣ, ಎರಡನೇ ಹಂತದಲ್ಲಿ ಉತ್ತರ ಭಾಗದಲ್ಲಿ ಚುನಾವಣೆ




ಬೆಂಗಳೂರು, ಮಾ. 16 - ಲೋಕಸಭಾ ಚುನಾವಣೆ ದಿನಾಂಕಗಳು ಘೋಷಣೆಯಾಗಿದ್ದು, ಕರ್ನಾಟಕದಲ್ಲಿ ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ಏಪ್ರಿಲ್ 26ರಂದು ಮೊದಲ ಹಂತದಲ್ಲಿ ಮತ್ತು ಮೇ 7ರಂದು ಎರಡನೇ ಹಂತದಲ್ಲಿ ಮತದಾನ ನಡೆಯಲಿದೆ. ಜೂನ್ 4ಕ್ಕೆ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.

ಮುಖ್ಯಚುನಾವಣಾ ಆಯುಕ್ತ ರಾಜೀವ್ ಕುಮಾರ್ ದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದರು.

ಕರ್ನಾಟಕದಲ್ಲಿ ಮೊದಲ ಹಂತದಲ್ಲಿ ದಕ್ಷಿಣ ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳಿಗೆ ಏಪ್ರಿಲ್ 26ರಂದು ಹಾಗೂ ಉತ್ತರ ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳಿಗೆ ಮೇ 7 ರಂದು ಮತದಾನ ನಡೆಯಲಿದೆ.

ಮೊದಲ ಹಂತದಲ್ಲಿ ಏಪ್ರಿಲ್ 26 ರಂದು ಚುನಾವಣೆ ನಡೆಯಲಿರುವ ಕ್ಷೇತ್ರಗಳಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಕೇಂದ್ರ, (2ನೇ ಪುಟಕ್ಕೆ)

## ಏ.19ರಿಂದ ಏಳು ಹಂತಗಳಲ್ಲಿ ಲೋಕಸಭಾ ಚುನಾವಣೆ



ನವದೆಹಲಿ, ಮಾ. 16 – ಲೋಕಸಭಾ ಚುನಾವಣೆ ಏಪ್ರಿಲ್ 19ರಿಂದ ಆರಂಭವಾಗಲಿದ್ದು, ಏಳು ಹಂತಗಳಲ್ಲಿ ಪೂರ್ಣಗೊಳ್ಳಲಿದೆ. ಜೂನ್ 4ರಂದು ಮತ ಎಣಿಕೆ ನಡೆಯಲಿದೆ ಎಂದು ಚುನಾವಣಾ ಆಯೋಗ ಪ್ರಕಟಿಸಿದೆ.

ಏಪ್ರಿಲ್ 26, ಮೇ 7, ಮೇ 13, ಮೇ 20, ಮೇ 25 ಹಾಗೂ ಜೂನ್ 1ರಂದು ಮತದಾನ ನಡೆಯಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅರುಣಾಚಲ ಪ್ರದೇಶ ಹಾಗೂ ಸಿಕ್ಕಿಂ ವಿಧಾನಸಭೆಗಳಿಗೆ (2ನೇ ಪುಟಕ್ಕೆ)

## ಮೇ 7ರ ಮತದಾನಕ್ಕೆ ದಾವಣಗೆರೆ ಸಜ್ಜು: ಡಿಸಿ



ದಾವಣಗೆರೆ, ಮಾ.16- ಭಾರತ ಚುನಾವಣಾ ಆಯೋಗವು ಸಾರ್ವತ್ರಿಕ ಲೋಕಸಭಾ ಚುನಾವಣೆಗೆ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ದಾವಣಗೆರೆ ಲೋಕಸಭಾ ಕ್ಷೇತ್ರದ ಚುನಾವಣೆ ರಾಜ್ಯದ ಎರಡನೇ ಹಂತದಲ್ಲಿ ನಡೆಯಲಿದ್ದು, ಮೇ 7 ರಂದು ಮತದಾನ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

ಶನಿವಾರ ಸಂಜೆ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಏಪ್ರಿಲ್ 12 ರಂದು ಚುನಾವಣಾ ಅಧಿಸೂಚನೆ ಪ್ರಕಟವಾಗಲಿದೆ. ಏ.19 ರ ವರೆಗೆ ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಏ.20 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರಗಳನ್ನು ವಾಪಸ್ ಪಡೆಯಲು ಏ.22 ಕೊನೆಯ ದಿನವಾಗಿರುತ್ತದೆ. ಮತದಾನವು ಮೇ 7 ರಂದು ನಡೆಯಲಿದೆ. ಮತ ಎಣಿಕೆ ಜೂನ್ 4 ರಂದು ದಾವಣಗೆರೆ ವಿ.ವಿ. ಆವರಣದಲ್ಲಿ ನಡೆಯಲಿದೆ ಎಂದರು.

ಜಿಲ್ಲಾಧಿಕಾರಿಗಳ ಕಚೇರಿ ನ್ಯಾಯಾಲಯದ ಸಭಾಂಗಣವನ್ನು ಚುನಾವಣಾಧಿಕಾರಿಗಳ ಕಚೇರಿಯನ್ನಾಗಿ ಮಾಡಲಾಗಿದ್ದು, ಇಲ್ಲಿಯೇ ನಾಮಪತ್ರಗಳನ್ನು ಸ್ವೀಕರಿಸಲಾಗುತ್ತದೆ. ನಾಮಪತ್ರ ಸಲ್ಲಿಕೆ ವೇಳೆ ಸಾಮಾನ್ಯ ಅಭ್ಯರ್ಥಿಯಾಗಿದ್ದಲ್ಲಿ 25 ಸಾವಿರ ರೂ. ಹಾಗೂ ಪ.ಜಾ, ಪ.ಪಂಗಡ ಅಭ್ಯರ್ಥಿಯಾಗಿದ್ದಲ್ಲಿ 12500 ರೂ. ಠೇವಣಿ ಸಲ್ಲಿಸಬೇಕು. ಚುನಾವಣಾ ವೆಚ್ಚದ ಮಿತಿ ಪ್ರತಿ ಅಭ್ಯರ್ಥಿಗೆ 95 ಲಕ್ಷ ರೂ. ಮಿತಿ ಇದೆ ಎಂದರು.

**ರಾಜಕೀಯ ಜಾಹಿರಾತು ತೆರವು;** ಮಾದರಿ ನೀತಿ ಸಂಹಿತೆಯು ತಕ್ಷಣದಿಂದಲೇ ಜಾರಿಯಲ್ಲಿದ್ದು ಜೂನ್ 6 ರವರೆಗೆ ಜಾರಿಯಲ್ಲಿರುತ್ತದೆ. ಈಗಾಗಲೇ ರಾಜಕೀಯ ಪ್ರೇರಿತ ಫ್ಲೆಕ್ಸ್, ಬಂಟಿಂಗ್ಸ್, ಪೋಸ್ಟರ್, ಕರಪತ್ರಗಳನ್ನು ಅಳವಡಿಸಿದ್ದಲ್ಲಿ ಅವುಗಳನ್ನು 24 ಗಂಟೆಯೊಳಗಾಗಿ ಕೂಡಲೇ ತೆರವು ಮಾಡಬೇಕು. ಫ್ಲೆಕ್ಸ್ ಅಳವಡಿಸಲು ಚುನಾವಣಾಧಿಕಾರಿ, ಸಹಾಯಕ ಚುನಾವಣಾಧಿಕಾರಿಗಳಿಂದ ಅನುಮತಿ ಪಡೆದು, ಅನುಮತಿ ನೀಡಿದ ಅವಧಿ ಮತ್ತು ಸ್ಥಳದಲ್ಲಿ ಮಾತ್ರ ಪ್ರದರ್ಶನಕ್ಕೆ ಅವಕಾಶ ಇರುತ್ತದೆ. ಎಲ್ಲಾ ಸರ್ಕಾರಿ ಇಲಾಖೆಗಳ ವೆಬ್‌ಸೈಟ್, ಕಾರ್ಯಕ್ರಮಗಳ ಪ್ರದರ್ಶನದಲ್ಲಿ ರಾಜಕೀಯ ವ್ಯಕ್ತಿಗಳ ಭಾವಚಿತ್ರ ಬಳಸಿದ್ದಲ್ಲಿ ತೆರವು ಮಾಡಬೇಕು. ಯಾವುದೇ ಹೊಸ ಕಾಮಗಾರಿ ಕೈಗೊಳ್ಳುವಂತಿಲ್ಲ, ಈಗಾಗಲೇ ಆರಂಭಿಸಿದ ಕಾಮಗಾರಿಗಳನ್ನು ಮುಂದುವರೆಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

**ಮಾದರಿ ನೀತಿ ಸಂಹಿತೆ ಜಾರಿಗೆ ತಂಡ ರಚನೆ:** ಮಾದರಿ ನೀತಿ ಸಂಹಿತೆ ಜಾರಿಗೆ ತಂಡಗಳನ್ನು ರಚಿಸಲಾಗಿದೆ. ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಸಹಾಯಕ ಚುನಾವಾಣಾ ಧಿಕಾರಿಗಳ ನೇಮಕ ಮಾಡಲಾಗಿದೆ ಮತ್ತು ಜಿಲ್ಲೆಯ ಗಡಿಭಾಗದಲ್ಲಿ 20 ಚೆಕ್‌ಪೋಸ್ಟ್, ಜಿಲ್ಲೆಯೊಳಗೆ 15 ಚೆಕ್‌ಪೋಸ್ಟ್‌ಗಳನ್ನು (2ನೇ ಪುಟಕ್ಕೆ)

## 'ದಾವಣಗೆರೆ ಮದರ್ ಥೆರೇಸಾ' ನಾಗಮ್ಮ ಕೇಶವಮೂರ್ತಿ ಇನ್ನಿಲ್ಲ

ದಾವಣಗೆರೆ,ಮಾ.16- ತಾವು ಸಮರ್ಥವಾಗಿ ನಿರ್ವಹಿಸುತ್ತಿದ್ದ ಸಾಮಾಜಿಕ ಸೇವೆಯ ಹಿನ್ನೆಲೆ ಯಲ್ಲಿ 'ದಾವಣಗೆರೆ ಮದರ್ ಥೆರೇಸಾ' ಎಂದೇ ಹೆಸರಾಗಿದ್ದ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಇಂದು ಸಂಜೆ 4.30ಕ್ಕೆ ನಿಧನರಾದರು.

ಕೆಲವು ವರ್ಷಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ನಾಗಮ್ಮ ಅವರಿಗೆ ಸುಮಾರು 90 ವರ್ಷ ವಯಸ್ಸಾಗಿತ್ತು. ಪುತ್ರ ಡಾ॥ ಸಿ.ಕೆ.ಜಯಂತ್, ಸೊಸೆ ಡಾ॥ ಶೀಲಾ ಜಯಂತ್ ಹಾಗೂ ಮೊಮ್ಮಗಳು ಮೇಘನಾ ಮತ್ತು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕಾಗಿ ನಾಳೆ ದಿನಾಂಕ 17ರ ಭಾನುವಾರ ಮಧ್ಯಾಹ್ನ 2.30ರವರೆಗೆ ನಗರದ ಪಿ.ಜೆ. ಬಡಾವಣೆ 3ನೇ ಮುಖ್ಯ ರಸ್ತೆಯಲ್ಲಿರುವ ಅವರ ನಿವಾಸದಲ್ಲಿಡಲಾಗುವುದು. ನಂತರ ಮಧ್ಯಾಹ್ನ 3 ಗಂಟೆಗೆ ವೈಕುಂಠಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು



ಅವರ ಕುಟುಂಬ ವರ್ಗದವರು ತಿಳಿಸಿದ್ದಾರೆ.


**ಸಂಕ್ಷಿಪ್ತ ಪರಿಚಯ :** ಬೆಂಗಳೂರಿನ ಎಂ.ಎನ್.ರಾಮನ್ ಮತ್ತು ಸಾಕಮ್ಮ ದಂಪತಿ ಪುತ್ರಿಯಾಗಿದ್ದ ನಾಗಮ್ಮನವರು, 1951ರಲ್ಲಿ ದಾವಣಗೆರೆಯ ಉದ್ಯಮಿ, ಚನ್ನಗಿರಿ ರಂಗಪ್ಪನವರ ದ್ವಿತೀಯ ಪುತ್ರ ಸಿ.ಕೇಶವಮೂರ್ತಿ ಅವರನ್ನು ವಿವಾಹವಾಗಿ ದಾವಣಗೆರೆಗೆ ಬಂದರು. ತಮ್ಮ ಅತ್ತೆ ಶ್ರೀಮತಿ ರಾಧಮ್ಮ ಅವರ (5ನೇ ಪುಟಕ್ಕೆ)


CET, NEET
Crash Course
30 Days, 20 Test
Limited Seats
Fee 8,500/- only
WINNERS
CAREER ACADEMY
COACHING CENTRE FOR ALL EXAMS
Near Stadium, P.J. Extn., Davangere
9886997892
9148596892





ಶ್ಯಾಬನೂರಿನಲ್ಲಿ ಇಂದು ಕಂಕಣಧಾರಣೆ
ದಿನಾಂಕ 19.3.2024 ರ ಮಂಗಳವಾರ
ರಾತ್ರಿ 12 ಗಂಟೆಗೆ ರಥೋತ್ಸವ
ದಿನಾಂಕ 20.3.2024 ರ ಬುಧವಾರ ಬೆಲ್ಲದ ಬಂಡಿ
ದಿನಾಂಕ 21.3.2024 ರ ಗುರುವಾರ ಓಕುಳಿ
ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...

# ಎಸ್.ಎ. ರವೀಂದ್ರನಾಥ್ ನೇತೃತ್ವದಲ್ಲಿ ಇಂದು ಬಿಜೆಪಿ ಸಮಾನ ಮನಸ್ಕರ ಸಭೆ



ಹೊನ್ನಾಳಿ, ಮಾ. 16- ದಾವಣಗೆರೆಯಲ್ಲಿ ನಾಳೆ ದಿನಾಂಕ 17 ರ ಭಾನುವಾರ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರ ನೇತೃತ್ವದಲ್ಲಿ ಬಿಜೆಪಿ ಸಮಾನ ಮನಸ್ಕರ ಸಭೆ ಕರೆಯಲಾಗಿದೆ. ಸಭೆಯಲ್ಲಿ ಲೋಕಸಭಾ ಚುನಾವಣೆ ವಿಷಯವಾಗಿ ನಮ್ಮ ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದ್ದಾರೆ.

ಹೊನ್ನಾಳಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಹೆಚ್. ಸುರೇಶ್ ಅವರ ನಿವಾಸದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

**ಸಭೆಗೆ ಆಹ್ವಾನವಿರಲಿಲ್ಲ:** ಶುಕ್ರವಾರ ಲೋಕಸಭಾ ಚುನಾವಣಾ ಕಾರ್ಯಾಲಯ ಉದ್ಘಾಟನೆಗೆ ಏಕೆ ಭಾಗವಹಿಸಿರಲಿಲ್ಲ ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನನಗೆ ಅಧಿಕೃತವಾಗಿ ಆಹ್ವಾನ ಬಂದಿರಲಿಲ್ಲ. ಅದಕ್ಕಾಗಿ ಭಾಗವಹಿಸಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ನಾಳೆ ಭಾನುವಾರ ಸಭೆ ನಡೆಯುವ ಸ್ಥಳ ಹಾಗೂ ಸಮಯ ನಿರ್ಧರಿಸಿಲ್ಲ. ಸಭೆ ನಡೆಯುವುದರ ಮೂಲಕ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ರೇಣುಕಾಚಾರ್ಯರನ್ನು ಬಿಟ್ಟು ಲೋಕಸಭೆ ಚುನಾವಣೆ ನಡೆಸೋಣ ಎಂಬ ಮಾತುಗಳು ಕೇಳಿಬರುತ್ತಿವೆ. ಇಂತಹ ಅನೇಕ ಗಂಭೀರ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚಿತವಾಗಲಿವೆ ಎಂದು ಸಭೆಯ ಗಂಭೀರತೆ ವಿವರಿಸಿ, ಪತ್ರಕರ್ತರಿಂದ ಎದುರಾದ ಅನೇಕ ಪ್ರಶ್ನೆಗಳಿಗೆ ನಿಮಗೆ ನಾಳೆಯ ಸಭೆಯ ನಂತರವೇ ಉತ್ತರ ದೊರೆಯಲಿದೆ ಎಂದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ಜೆ.ಕೆ. ಸುರೇಶ್ ಮಾತನಾಡಿ, ಇದೇ 18 ರಂದು ಮಧ್ಯಾಹ್ನ 2 ಗಂಟೆಗೆ ಶಿವಮೊಗ್ಗ ಫ್ರೀಡಂಪಾರ್ಕ್ ಬಳಿ ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ ಸೇರಿದಂತೆ ನಾಲ್ಕು ಕ್ಷೇತ್ರಗಳ ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ತಾಲ್ಲೂಕಿನಿಂದ 15 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಧರ್ಮಣ್ಣ, ಪಾಲಾಕ್ಷಪ್ಪ, ಸುರೇಶ್, ಬೀರಪ್ಪ, ಸೀಮೆಎಣ್ಣೆ ಪಾಲಾಕ್ಷಪ್ಪ, ರಂಗಣ್ಣ, ಕುಬೇರಪ್ಪ, ಅರಕೆರೆ ನಾಗರಾಜ್, ಸುರೇಂದ್ರನಾಯ್ಕ, ಶ್ರೀಧರ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಮಹಾಶಿವರಾತ್ರಿ ಕಾರ್ಯಕ್ರಮ

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವಿದ್ಯಾನಗರ ಶಾಖೆಯಲ್ಲಿ ಇಂದು ಸಂಜೆ 6 ಗಂಟೆಗೆ 88ನೇ ಮಹಾಶಿವರಾತ್ರಿ ನಡೆಯಲಿದೆ. ಬ್ರಹ್ಮಾಕುಮಾರಿ ಜ್ಞಾನೇಶ್ವರಿ ಅವರು ಶಿವರಾತ್ರಿ ಕುರಿತು ಮಾತನಾಡುವರು. ಬ್ರಹ್ಮಾಕುಮಾರಿ ಲೀಲಾಜಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳು : ಎಸ್.ಬಿ. ರಾಜಶೇಖರಪ್ಪ, ಟಿ.ಎಸ್. ಬಸವರಾಜಪ್ಪ, ಹೆಚ್.ಎಸ್. ಪ್ರಭು, ಎಂ.ಆರ್. ಪ್ರದೀಪ್, ಡಾ. ವಿಜಯ, ಎಂ. ಶೇಖರ್, ಶ್ರೀಮತಿ ಲಕ್ಕಮ್ಮ.

### ಕಡಕೋಳ ಗ್ರಾಮದ ಜಿಕ್ರಿಯ ಸಲಾಂ ನಿಧನ



ಹರಪನಹಳ್ಳಿ ತಾಲ್ಲೂಕಿನ ಬೆಣ್ಣೆಹಳ್ಳಿಯ ಕಡಕೋಳ ಗ್ರಾಮದ ಜೆ.ಡಿ.ಎಸ್. ತಾಲ್ಲೂಕು ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಜಿಕ್ರಿಯ ಸಲಾಂ (54) ಅವರು ದಿ.: 16.03.2024 ರಂದು ಶನಿವಾರ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಯನ್ನು ಸ್ವಗ್ರಾಮ ಕಡಕೋಳದಲ್ಲಿ ದಿನಾಂಕ 17.03.2024ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನೇರವೇರಿಸಲಾಗವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

**ಸಂತಾಪ** : ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಶಿರಹಟ್ಟಿ ದಂಡ್ಯೆಪ್ಪ, ಮಾಜಿ ಅಧ್ಯಕ್ಷ ಪಾಟೀಲ್ ಬೆಟ್ಟನಗೌಡ, ಮುಖಂಡರಾದ ಕಡಕೋಳ ನೂರುದ್ದೀನ್, ಪಿ. ಶೌಕತ್ ಅಲ್ಲಿ ಸೇರಿದಂತೆ ಇತರರು ಸಂತಾಪ ಸೂಚಿಸಿದ್ದಾರೆ

### ತುಂಗಭದ್ರಾ ನದಿ ಸೇತುವೆಯ ಬಳಿ ಬೈಕ್ ಅಪಘಾತ : ಸಾವು



ಹರಿಹರ, ಮಾ.16 - ನಗರದ ತುಂಗಭದ್ರಾ ನದಿ ಸೇತುವೆಯ ಬಳಿ ಬೈಕ್ ಅಪಘಾತದಲ್ಲಿ ನಗರದ ಹೊಸ ಭರಂಪುರ ನಿವಾಸಿ ಬೆಣ್ಣೆ ವಿಜಯಕುಮಾರ್ ಮೃತಪಟ್ಟಿದ್ದಾರೆ. ಶನಿವಾರ ಸಂಜೆ 4 ಗಂಟೆಯ ಸುಮಾರಿಗೆ ಕುಮಾರ ಪಟ್ಟಣದಿಂದ ಹರಿಹರ ನಗರಕ್ಕೆ ಬರುವ ಮಾರ್ಗದಲ್ಲಿ ಸೇತುವೆಯ ಬಳಿ ಬೈಕ್ ಅಪಘಾತವಾಗಿದ್ದು ಸ್ಥಳದಲ್ಲೇ ಯುವಕ ಮರಣವನ್ನು ಹೊಂದಿರುತ್ತಾರೆ. ಮೃತ ವ್ಯಕ್ತಿಗೆ ಎರಡು ಹೆಣ್ಣು ಮಕ್ಕಳು, ಓರ್ವ ಪುತ್ರ ಇದ್ದಾರೆ ಎನ್ನಲಾಗಿದೆ.

### ತೊಟ್ಟಿಯಲ್ಲಿ ಬಿದ್ದು ಮಗು ಸಾವು

ಹೊನ್ನಾಳಿ, ಮಾ. 16- ಪಟ್ಟಣದ ತುಂಗಭದ್ರಾ ಬಡಾವಣೆಯ ಶಕಿಲ್ ಎಂಬಾತನ ಮೂರು ವರ್ಷದ ನದೀಬ್ ಎಂಬ ಗಂಡು ಮಗು ಶನಿವಾರ ಸಂಜೆ ಪಕ್ಕದ ಮನೆಯ ನೀರಿನ ತೊಟ್ಟಿಗೆ ಬಿದ್ದು ಸಾವಿಗೀಡಾದ ಬಗ್ಗೆ ವರದಿಯಾಗಿದೆ. ಮೃತ ಮಗುವಿನ ತಂದೆ ದುಬೈಗೆ ಕೆಲಸಕ್ಕೆ ಹೋಗಿದ್ದು, ಮನೆಯಲ್ಲಿ ಮಗುವಿನೊಂದಿಗೆ ತಾಯಿ ವಾಸಗಿದ್ದರು ಎಂದು ಹೇಳಲಾಗಿದೆ.

# ಲೋಕಾಸಭಾ ಸಮರ : ರಾಜ್ಯದಲ್ಲಿ ಏ.26, ಮೇ 7ರಂದು

(1ನೇ ಪುಟದಿಂದ) ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಹಾಸನ, ಉಡುಪಿ-ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು-ಕೊಡಗು, ಚಾಮರಾಜನಗರ ಮತ್ತು ದಕ್ಷಿಣ ಕನ್ನಡ ಸೇರಿವೆ.

ಕರ್ನಾಟಕದಲ್ಲಿ ನಡೆಯಲಿರುವ ಮೊದಲ ಹಂತದ ಚುನಾವಣೆಗೆ ಅಧಿಸೂಚನೆ ಮಾರ್ಚ್ 28ರಂದು ಹೊರಬೀಳಲಿದ್ದು ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ. ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 4 ಕೊನೆಯ ದಿನವಾಗಿದೆ. ನಾಮಪತ್ರ ಪರಿಶೀಲನೆ ಏಪ್ರಿಲ್ 5ರಂದು ನಡೆಯಲಿದ್ದು, ನಾಮಪತ್ರ ಹಿಂತೆಗೆದುಕೊಳ್ಳಲು ಏಪ್ರಿಲ್ 8 ಕೊನೆಯ ದಿನವಾಗಿದೆ. ಏಪ್ರಿಲ್ 26 ರಂದು ಮತದಾನ ನಿಗದಿಯಾಗಿದೆ.

ಎರಡನೇ ಹಂತದಲ್ಲಿ ಮೇ 7ರಂದು ಚುನಾವಣೆ ನಡೆಯಲಿರುವ ಕ್ಷೇತ್ರಗಳಲ್ಲಿ ಬೀದರ್, ಚಿಕ್ಕೋಡಿ, ಬೆಳಗಾವಿ, ಕಲಬುರಗಿ, ವಿಜಯಪುರ, ಬಾಗಲಕೋಟೆ, ಕೊಪ್ಪಳ, ರಾಯಚೂರು, ಬಳ್ಳಾರಿ, ಹಾವೇರಿ-ಗದಗ, ದಾವಣಗೆರೆ, ಶಿವಮೊಗ್ಗ, ಧಾರವಾಡ, ಉತ್ತರ ಕನ್ನಡ ಸೇರಿವೆ.

ಇದರೊಂದಿಗೆ ಮೇ 7ರಂದು ಎರಡನೇ ಹಂತದಲ್ಲಿ ನಡೆಯುವ ಕೊಪ್ಪಳ ಲೋಕಸಭಾ ಕ್ಷೇತ್ರದ ಚುನಾವಣೆ ಸಂದರ್ಭದಲ್ಲೇ ಶಾಸಕ ರಾಜಾವೆಂಕಟಪ್ಪ ನಾಯಕ ಅವರ ನಿಧನದಿಂದ ತೆರವಾಗಿರುವ ಕರ್ನಾಟಕದ ಸುರಪುರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯೂ ನಡೆಯಲಿದೆ.

ಕರ್ನಾಟಕದಲ್ಲಿ ನಡೆಯಲಿರುವ ಎರಡನೇ ಹಂತದ ಚುನಾವಣೆಗೆ ಅಧಿಸೂಚನೆ ಏಪ್ರಿಲ್ 12 ರಂದು ಹೊರಬೀಳಲಿದ್ದು, ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 19 ಕೊನೆಯ ದಿನವಾಗಿದೆ. ನಾಮಪತ್ರ ಪರಿಶೀಲನೆ ಏಪ್ರಿಲ್ 20 ರಂದು ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಏಪ್ರಿಲ್ 22 ಕೊನೆಯ ದಿನವಾಗಿದೆ. ಮೇ 7ರಂದು ಮತದಾನ ನಡೆಯಲಿದೆ.

ರಾಷ್ಟ್ರಾದ್ಯಂತ 543 ಲೋಕಸಭಾ ಕ್ಷೇತ್ರಗಳಿಗೆ ಒಟ್ಟು ಏಳು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಮೊದಲನೇ ಹಂತ ಏಪ್ರಿಲ್ 19 ಮತ್ತು ಎರಡನೇ ಹಂತ 26, ಮೂರನೇ ಹಂತ ಮೇ 7, ನಾಲ್ಕನೇ ಹಂತ ಮೇ 13, ಐದನೇ ಹಂತ ಮೇ 20, ಆರನೇ ಹಂತ ಮೇ 25 ಮತ್ತು ಏಳನೇ ಹಾಗೂ ಕೊನೆಯ ಹಂತ ಜೂನ್ 1ರಂದು ಮತದಾನ ನಡೆಯಲಿದೆ.

ಒಟ್ಟು 96.8 ಕೋಟಿ ಮತದಾರರಿದ್ದು, ಪುರುಷ ಮತದಾರರ ಸಂಖ್ಯೆ 49.71 ಕೋಟಿ ಯಾಗಿದ್ದು, ಮಹಿಳಾ ಮತದಾರರ ಸಂಖ್ಯೆ 47.1 ಕೋಟಿಯಾಗಿದೆ. 1.8 ಕೋಟಿ ಹೊಸ ಮತದಾರರು ಈ ಬಾರಿ ಮತದಾನದ ಹಕ್ಕು ಪಡೆದಿದ್ದಾರೆ.

ಚುನಾವಣಾ ಕಾರ್ಯಕ್ಕೆ 1.5 ಕೋಟಿ ಸಿಬ್ಬಂದಿ ನೇಮಕವಾಗಲಿದ್ದಾರೆ. ಕೇಂದ್ರ ಚುನಾವಣಾ ಆಯೋಗವು ದೇಶಾದ್ಯಂತ ಒಟ್ಟು 2,100 ಮುಖ್ಯ ಚುನಾವಣಾ ವೀಕ್ಷಕರನ್ನು ನೇಮಿಸಿದೆ. 85 ವರ್ಷ ಮೀರಿದ ಮತದಾರರು ಮತಗಟ್ಟೆಗೆ ಬರಲು ಸಾಧ್ಯವಾಗದೆ, ಮನೆಯಿಂದಲೇ ಮತದಾನ ಮಾಡಲು ಇಚ್ಛಿಸಿದರೆ ಮನೆಯಿಂದಲೇ ಮತದಾನ ಮಾಡುವ ವ್ಯವಸ್ಥೆ ಮಾಡಲಾಗುವುದು.

ಮತಗಟ್ಟೆಗಳಲ್ಲಿ ಕುಡಿಯುವ ನೀರು, ಶೌಚಾಲಯ, ವಿಶೇಷಚೇತನರಿಗೆ ರ್‍ಯಾಂಪ್, ಗಾಲಿ ಕುರ್ಚಿ ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವುದು.

ಚುನಾವಣಾ ಮಾರ್ಗಸೂಚಿಗಳ ಪಾಲನೆ ಬಗ್ಗೆ ನಿಗಾ ವಹಿಸಲು ಈ ಬಾರಿ ಡ್ರೋನ್ ಬಳಸಲಾಗುತ್ತಿದೆ. ಮತದಾರರಿಗೆ ಆಮಿಷ ಒಡ್ಡುವಂತಹ ಉಡುಗೊರೆ ನೀಡುವುದು, ಫೋನ್ ಪೇ ಮತ್ತು ಗೂಗಲ್ ಪೇ ಚಟುವಟಿಕೆಗಳ ಮೇಲೆ ನಿಗಾ ಇಡಲಾಗುವುದು.

ಮಾದರಿ ಚುನಾವಣಾ ನೀತಿ ಸಂಹಿತೆ ಇಂದಿನಿಂದಲೇ ಜಾರಿಗೆ ಬಂದಿದ್ದು, ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವಂತೆ ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದೆ.

## ಕ್ಷೇತ್ರದಲ್ಲಿ 16,79,746 ಮತದಾರರು, 1946 ಮತಗಟ್ಟೆಗಳು

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 1,946 ಮತಗಟ್ಟೆಗಳಿದ್ದು, ದಾವಣಗೆರೆ ಜಿಲ್ಲೆಯಲ್ಲಿ 1693 ಮತಗಟ್ಟೆಗಳಿವೆ. ಕ್ಷೇತ್ರವ್ಯಾಪ್ತಿಯಲ್ಲಿ ಹರಪನಹಳ್ಳಿ ಸೇರಿದಂತೆ ಪುರುಷ 8,38,705, ಮಹಿಳಾ 8,40,340, ಇತರೆ 136 ಹಾಗೂ 565 ಸೇವಾ ಮತದಾರರು ಸೇರಿ 16,79,746 ಮತದಾರರಿದ್ದಾರೆ.

ವಿಧಾನಸಭಾ ಚುನಾವಣೆ ನಂತರ 2024 ರ ಜನವರಿ 1 ಕ್ಕೆ 18 ವರ್ಷ ತುಂಬುವ ಯುವ ಮತದಾರರನ್ನು ಸೇರ್ಪಡೆ ಮಾಡಲಾಗಿದ್ದು 19,507 ಪುರುಷ, 17,339 ಮಹಿಳಾ, 3 ಇತರೆ ಸೇರಿ 36,849 ಹೊಸ ಯುವ ಮತದಾರರು ಪಟ್ಟಿಯಲ್ಲಿ ನೋಂದಾಯಿಸಿದ್ದಾರೆ.

ಏಪ್ರಿಲ್ ವರೆಗೂ ಹೊಸದಾಗಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಲು ಅವಕಾಶ ಇದ್ದು, ಆನ್‌ಲೈನ್ ಮೂಲಕ ಅಥವಾ ಬಿ.ಎಲ್.ಓ ಮೂಲಕ ನೋಂದಾಯಿಸಿ ಯುವ ಮತದಾರರಾಗಿ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಬಹುದಾಗಿದೆ ಎಂದರು.

85 ವರ್ಷ ಮೇಲ್ಪಟ್ಟ 11258, ವಿಶೇಷಚೇತನ 20351 ಮತದಾರರು ಹಾಗೂ 180 ಜನರು ನೂರು ವರ್ಷಕ್ಕಿಂತಲೂ ಹೆಚ್ಚಿನ ಮತದಾರರಿದ್ದಾರೆ.

## ಮೇ 7ರ ಮತದಾನಕ್ಕೆ ದಾವಣಗೆರೆ ಸಜ್ಜು : ಡಿಸಿ

(1ನೇ ಪುಟದಿಂದ) ಸ್ಥಾಪನೆ ಮಾಡಲಾಗಿದೆ. ಪೊಲೀಸ್ ಅಧಿಕಾರಿಗಳನ್ನೊಳಗೊಂಡು 25 ಫ್ಲೈಯಿಂಗ್ ಸ್ಕ್ವಾಡ್ ನೇಮಕ ಮಾಡಲಾಗಿದೆ. ವಿಡಿಯೋ ಸರ್ವೈಲೆನ್ಸ್ ಟೀಮ್, ಸಿಸಿ ಟಿವಿ ಅಳವಡಿಕೆ ಮಾಡಲಿದ್ದು, ಈ ತಂಡಗಳು ದಿನದ 24 ಗಂಟೆಯು ಮೂರು ಪಾಳಿಯಲ್ಲಿ ಕೆಲಸ ನಿರ್ವಹಿಸಲಿವೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್ ಮಾತನಾಡಿ, ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಐದು ವಿಶೇಷ ಮತಗಟ್ಟೆಗಳನ್ನು ಸ್ಥಾಪನೆ ಮಾಡಲಾಗುತ್ತದೆ. ಸಖಿ, ವಿಶೇಷಚೇತನರು, ಯುವ ಮತದಾರರು, ಸಂಪ್ರದಾಯ, ಧ್ಯೇಯ ಮತಗಟ್ಟೆಗಳ ಸ್ಥಾಪನೆ ಮಾಡಲಾಗುತ್ತದೆ.

ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಮುಕ್ತ, ನ್ಯಾಯಸಮ್ಮತ, ಶಾಂತಿಯುತ ಚುನಾವಣೆ ನಡೆಸಲು ಎಲ್ಲಾ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ರೌಡಿ ಶೀಟರ್‌ಗಳ ಬಾಂಡಿಂಗ್ ಓವರ್, ಸಮಾಜದಲ್ಲಿ ಶಾಂತಿ ಕದಡುವವರ ಪಟ್ಟಿ ಮಾಡಿ ಅವರ ಮೇಲೆ ನಿಗಾವಹಿಸಲಾಗುತ್ತಿದೆ. ಮೊಬೈಲ್ ತಂಡ, ಚೆಕ್‌ಪೋಸ್ಟ್‌ಗಳ ಮೂಲಕ ತೀವ್ರ ಕಟ್ಟೆಚ್ಚರ ವಹಿಸುವ ಮೂಲಕ ನ್ಯಾಯಸಮ್ಮತ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು. ಅಪರ ಜಿಲ್ಲಾಧಿಕಾರಿ ಸೈಯದಾ ಅಫ್ರಿನ್ ಭಾನು ಎಸ್. ಬಳ್ಳಾರಿ ಉಪಸ್ಥಿತರಿದ್ದರು.

## 1951ರ ನಂತರ ಅತ್ಯಂತ ಸುದೀರ್ಘ ಚುನಾವಣೆ

ನವದೆಹಲಿ, ಮಾ. 16 – ಸ್ವತಂತ್ರ ಭಾರತದಲ್ಲಿ 1951-52ರ ನಂತರ ಇದೇ ಮೊದಲ ಬಾರಿಗೆ ಸಂಸದೀಯ ಚುನಾವಣೆ ಸುದೀರ್ಘ ಕಾಲ ನಡೆಯಲಿದೆ.

1980ರಲ್ಲಿ ಅತಿ ಕಡಿಮೆ ನಾಲ್ಕು ದಿನಗಳಲ್ಲೇ ಸಾರ್ವತ್ರಿಕ ಚುನಾವಣೆ ಪೂರ್ಣಗೊಂಡಿತ್ತು. ಈ ಬಾರಿ ಚುನಾವಣೆ ಘೋಷಣೆಯಾದ ನಂತರ ಇಡೀ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲು 80 ದಿನಗಳು ಬೇಕಾಗಲಿವೆ. ಈ ಬಾರಿ ಏಳು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಏಪ್ರಿಲ್ 19ರಿಂದ ಆರಂಭವಾಗಲಿರುವ ಚುನಾವಣಾ ಪ್ರಕ್ರಿಯೆ ಜೂನ್ 4ರ ಮತ ಎಣಿಕೆಯೊಂದಿಗೆ ಪೂರ್ಣವಾಗಲಿದೆ.

ದೇಶದ ಮೊದಲ ಚುನಾವಣೆ ಅಕ್ಟೋಬರ್ 25, 1951ರಿಂದ ಫೆಬ್ರವರಿ 21, 1952ರ ನಡುವೆ ನಡೆದಿತ್ತು. ಇದು ಅತ್ಯಂತ ದೀರ್ಘಾವಧಿಯದ್ದಾಗಿದೆ. ಆಗ ಚುನಾವಣೆಯನ್ನು 68 ಹಂತಗಳಲ್ಲಿ ನಡೆಸಲಾಗಿತ್ತು.

## ಏ.19ರಿಂದ ಏಳು ಹಂತಗಳಲ್ಲಿ ಚುನಾವಣೆ

**ಅರುಣಾಚಲ, ಒಡಿಶಾ, ಸಿಕ್ಕಿಂ ಹಾಗೂ ಆಂಧ್ರ ಪ್ರದೇಶ ವಿಧಾನಸಭೆಗಳಿಗೂ ಚುನಾವಣೆ**

(1ನೇ ಪುಟದಿಂದ) ಏಪ್ರಿಲ್ 19 ಹಾಗೂ ಆಂಧ್ರ ಪ್ರದೇಶ ವಿಧಾನಸಭೆಗೆ ಮೇ 13ರಂದು ಚುನಾವಣೆ ನಡೆಯಲಿದೆ. ಒಡಿಶಾ ವಿಧಾನಸಭೆಗೆ ಮೇ 13ರಿಂದ ಜೂನ್ 1ರವರೆಗೆ ನಾಲ್ಕು ಹಂತಗಳಲ್ಲಿ ಚುನಾವಣೆ ನಡೆಯಲಿದೆ.

26 ವಿಧಾನಸಭಾ ಸ್ಥಾನಗಳಿಗೂ ಸಹ ಇದೇ ಅವಧಿಯಲ್ಲಿ ಉಪ ಚುನಾವಣೆ ನಡೆಯಲಿದೆ. ಪತ್ರಿಕಾಗೋಷ್ಠಿಯಲ್ಲಿ ನೂತನ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ ಹಾಗೂ ಸುಖಬೀರ್ ಸಿಂಗ್ ಸಂಧು ಅವರೂ ಉಪಸ್ಥಿತರಿದ್ದರು.

ಬಿಹಾರ, ಪಶ್ಚಿಮ ಬಂಗಾಳ ಹಾಗೂ ಉತ್ತರ ಪ್ರದೇಶಗಳಲ್ಲಿ ಏಳು ಹಂತಗಳಲ್ಲಿ ಮತದಾನ ನಡೆಯ ಲಿದೆ. ಚುನಾವಣೆಯಲ್ಲಿ ಎದುರಾಗುವ ತೋಳ್ಬಲ, ಹಣಬಲ, ಅಪಪ್ರಚಾರ ಹಾಗೂ ನೀತಿ ಸಂಹಿತೆಗಳ ಉಲ್ಲಂಘನೆಯನ್ನು ಎದುರಿಸಲು ಚುನಾವಣಾ ಆಯೋಗ ಸಜ್ಜಾಗಿದೆ ಎಂದು ಕುಮಾರ್ ತಿಳಿಸಿದ್ದಾರೆ.

**ಮನೆಯಿಂದ ಮತದಾನ** : 85 ವರ್ಷ ಮೀರಿದವರು ಹಾಗೂ ಶೇ.40ಕ್ಕಿಂತ ಹೆಚ್ಚಿನ ಅಂಗ ವೈಕಲ್ಯತೆ ಹೊಂದಿರುವವರು ತಮ್ಮ ಮನೆಗಳಿಂದ ಮತದಾನ ಮಾಡಲು ಅವಕಾಶ ಕಲ್ಪಿಸಲಾಗುವುದು. ಇದಕ್ಕಾಗಿ ಅವರಿಂದ 12 ಡಿ ಫಾರಂ ಪಡೆಯಲಾಗುವುದು. ದೇಶದಲ್ಲಿ 85 ವರ್ಷ ಮೀರಿದ ಸುಮಾರು 85 ಲಕ್ಷ ಮತದಾರರಿದ್ದಾರೆ. ಅಂಗವೈಕಲ್ಯತೆ ಎದುರಿಸುತ್ತಿರುವ ಮತದಾರರ ಸಂಖ್ಯೆ 88.4 ಲಕ್ಷ ಆಗಿದೆ. ಸುಮಾರು 21.18 ಲಕ್ಷ ಶತಾಯುಷಿ ಮತದಾರರಿದ್ದಾರೆ.

## ಜಮ್ಮು-ಕಾಶ್ಮೀರಕ್ಕಿಲ್ಲ ಚುನಾವಣೆ : ಅಸಮಾಧಾನ

(1ನೇ ಪುಟದಿಂದ) ವಿಧಾನಸಭಾ ಚುನಾವಣೆ ನಡೆಸಲಾಗುವುದು. ಭದ್ರತಾ ದೃಷ್ಟಿಯಿಂದ ಏಕಕಾಲಕ್ಕೆ ಚುನಾವಣೆ ನಡೆಸಲು ಸಾಧ್ಯವಾಗದು ಎಂದು ಚುನಾವಣಾ ಆಯೋಗ ತಿಳಿಸಿತ್ತು. ಒಂದು ದೇಶ ಒಂದು ಚುನಾವಣೆ ಎಂದು ಪ್ರಚಾರ ಮಾಡಲಾಗುತ್ತಿದೆ. ಆದರೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಲೋಕಸಭಾ ಚುನಾವಣೆಯ ಜೊತೆ ವಿಧಾನಸಭಾ ಚುನಾವಣೆ ನಡೆಸಲು ಸಾಧ್ಯವಾಗುತ್ತಿಲ್ಲ ಎಂದು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಓಮರ್ ಅಬ್ದುಲ್ಲಾ ಟೀಕಿಸಿದ್ದಾರೆ.

## ಇಂದು ಶಸ್ತ್ರ ಚಿಕಿತ್ಸಾ ಸಭೆ

ಆರ್‌ಕೆ ಆಸ್ಪತ್ರೆಯಲ್ಲಿ ಇಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರ ವರೆಗೆ ಮಣಿಪಾಲ್ ಆಸ್ಪತ್ರೆಯ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಬಿ. ರಾಜೇಂದ್ರ ಪ್ರಸಾದ್ ಅವರು ಸಮಾಲೋಚನೆಗೆ ಲಭ್ಯವಿರುತ್ತಾರೆ.

ಕೈ-ಕಾಲುಗಳ ಊತ, ನೋವು, ಮಧುಮೇಹ, ಡಯಾಲಿಸಿಸ್, ವಾಸಿಯಾಗದ ಗಾಯಗಳು, ಗ್ಯಾಂಗ್ರೀನ್ ಮುಂತಾದ ಸಮಸ್ಯೆಗಳ ಬಗ್ಗೆ ತಜ್ಞರ ಬಳಿ ಸಲಹೆ ಪಡೆಯಬಹುದು. ವಿವರಕ್ಕೆ ಸಂಪರ್ಕಿಸಿ : 8050560580.


**ಕರ್ನಾಟಕ ಸರ್ಕಾರ**

## ಗ್ರಾಮ ಪಂಚಾಯತ್ ಕಾರ್ಯಾಲಯ ಕಂದಗಲ್ಲು

ಸಂ:ಗ್ರಾಪಂ:ಕಾ: ಕಂದಗಲ್:ಅ.ಟೆಂ::ಇ-ಪ್ರೊ: 2023-2024 ದಿನಾಂಕ : 15/03/2024

**ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮೂಲಕ)**

ಈ ಗ್ರಾಮ ಪಂಚಾಯತ್ ಕಛೇರಿಯಿಂದ ಕೆಳಕಂಡ ಕಾಮಗಾರಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್ ಕಾರ್ಯಾಲಯ, ಕಂದಗಲ್ಲು, ದಾವಣಗೆರೆ. ಇವರು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖೆ ನಿಯಮಾವಳಿಯ ಮೇರೆಗೆ ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದ್ವಿ-ಲಕೋಟೆ ಟೆಂಡರ್‌ಗಳನ್ನು standard tender documents for procurement of works ನಮೂನೆಯಲ್ಲಿ ಆಹ್ವಾನಿಸಲಾಗಿದೆ.

1) ಖಾಲಿ ಟೆಂಡರ್ ದಾಖಲಾತಿಗಳಿಗಾಗಿ ಅರ್ಜಿ ಸ್ವೀಕರಿಸಿರುವ ಹಾಗೂ ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ : 22.03.2024 ಸಂಜೆ 5.00 ಘಂಟೆಗೆ.

2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿ.: 25.03.2024 ಬೆಳಿಗ್ಗೆ 11.00 ಘಂಟೆಗೆ. 3) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 25.03.2024 ಮಧ್ಯಾಹ್ನ 1.00 ಘಂಟೆಗೆ

| ಕ್ರ. ಸಂ. 01. | ಕಾಮಗಾರಿ ಹೆಸರು 2 | ಟೆಂಡರ್‌ಗೆ ಇಡಲಾಗದ ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ 3 | ಇ.ಎಂ.ಡಿ. ಮೊತ್ತ ರೂ. ಗಳಲ್ಲಿ 4 | ಖಾಲಿ ಟೆಂಡರ್ ಫಾರಂ ಬೆಲೆ (ತೆರಿಗೆ ಸೇರಿಸಿಕೊಂಡು) ರೂ.ಗಳಲ್ಲಿ 5 | ಕಾಮಗಾರಿ ಮುಗಿಸುವ ಅವಧಿ 6 | ಗುತ್ತಿಗೆದಾರರ ಅರ್ಹತೆ 7 | ಟೆಂಡರ್ ನಮೂನೆ 8 | ಮೀಸಲಾತಿ 9 |
|---|---|---|---|---|---|---|---|---|
| 2023-24ನೇ ಸಾಲಿನ 4235-02-102-006-(386) (ಐಸಿಡಿಎಸ್-ನರೇಗಾ) ಯೋಜನೆ | | | | | | | | |
| 01. | ದಾವಣಗೆರೆ ತಾಲ್ಲೂಕು ಕಂದಗಲ್ ಗ್ರಾಮದ ಅಂಗನವಾಡಿ ಬಿ ಕೇಂದ್ರದ ಕಟ್ಟಡ ನಿರ್ಮಾಣ | 12.00 | 30000-00 | ಕೆಪಿಪಿಪಿ ಪೋರ್ಟಲ್ ಪ್ರಕಾರ | 4 ತಿಂಗಳು | 4ನೇ ದರ್ಜೆ ಮತ್ತು ಮೇಲ್ಪಟ್ಟು | KWI | ಸಾಮಾನ್ಯ |

**ಷರತ್ತುಗಳು :** 1) ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯ ಹಾಲಿ ನೋಂದಾಯಿತ ಗುತ್ತಿಗೆದಾರರಾಗಿರಬೇಕು. ಗುತ್ತಿಗೆದಾರರ ನೋಂದಣಿ ಸಂಖ್ಯೆ ಮತ್ತು ದಿನಾಂಕ ಹಾಗೂ GST ಸಂಖ್ಯೆಗಳನ್ನು ನಮೂದಿಸಿರಬೇಕು. 2) ಗುತ್ತಿಗೆದಾರರು ಖಾಲಿ ಟೆಂಡರ್ ಫಾರಂಗಳಿಗೆ ಮತ್ತು EMDಗೆ ನಿಗದಿಪಡಿಸಿದ ಹಣವನ್ನು e-payment ಅಥವಾ NEFT challan ಮೂಲಕ ಸಲ್ಲಿಸತಕ್ಕದ್ದು, ಖಾಲಿ ಟೆಂಡರ್ ಫಾರಂ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ. 3) ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಷರತ್ತು ಮತ್ತು ನಿಬಂಧನೆಗಳನ್ನು ಇ-ಪ್ರೋಟಲ್‌ನಲ್ಲಿ ವಿವರಿಸಿದಂತೆ ಅಪ್ ಲೋಡ್ ಮಾಡುವುದು. 4) ಖಾಲಿ ಟೆಂಡರ್ ಡಾಕ್ಯುಮೆಂಟನ್ನು www.KPPP.karnataka.gov.in ವೆಬ್‌ಸೈಟಿನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ 8970331590 ರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. 5) ಗುತ್ತಿಗೆದಾರರು ನಮೂದಿಸಿದ ದರವು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ವ್ಯತ್ಯಾಸದ ಮೊತ್ತವನ್ನು ಹಾಗೂ KW ನಿಯಮಾನುಸಾರ ಟೆಂಡರ್‌ಕರಾರು ಮಾಡುವ ಮುಂಚೆ ಅನುಮೋದನೆಯಾದ ಮೊತ್ತಕ್ಕೆ ಶೇ. 5 ರಂತೆ ಭದ್ರತಾ ಠೇವಣಿಯನ್ನು FDR ರೂಪದಲ್ಲಿ ನೀಡಬೇಕು. 6) ಸರ್ಕಾರಿ ಆದೇಶದಂತೆ ಲೇಬರ್ ಸೆಸ್ ಶೇ.. 1% ರಂತೆ ಬಿಲ್ಲಿನಲ್ಲಿ ಕಡಿತ ಮಾಡಲಾಗುವುದು. 7) ಕಾಮಗಾರಿಗಳಿಗಾಗಿ ಬೇಕಾಗುವ ಸಿಮೆಂಟ್, ಕಬ್ಬಿಣ ಹಾಗೂ ಇತ್ಯಾದಿ ಸಾಮಗ್ರಿಗಳನ್ನು ಗುತ್ತಿಗೆದಾರರೇ ಸರಬರಾಜು ಮಾಡಿಕೊಳ್ಳಬೇಕಾಗಿರುವುದರಿಂದ, ಸದರಿ ಸಾಮಗ್ರಿಗಳು ಐ.ಎಸ್.ಐ. ತಾಂತ್ರಿಕ ಗುಣಮಟ್ಟ ಹೊಂದಿರಬೇಕು ಹಾಗೂ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಯನ್ನು ಕಾಮಗಾರಿ ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ಗುತ್ತಿಗೆದಾರರೇ ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಸಿ ವರದಿಗಳನ್ನು ಒದಗಿಸಬೇಕು. 8) ಯಾವುದೇ ಕಾರಣವನ್ನು ನೀಡದೇ ಟೆಂಡರ್ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಳ್ಳಲಾಗಿದೆ. ಯಾವುದೇ ಕಾರಣಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಪರ್ಕಜಾಲ (ಆನ್‌ಲೈನ್) ಸಿಗದಿದ್ದರೆ ಈ ಕಛೇರಿಯು ಜವಾಬ್ದಾರಿಯಲ್ಲ. 9) ಟೆಂಡರ್ ಅನುಮೋದನೆಯಾದ ಗುತ್ತಿಗೆದಾರರಿಗೆ ಒಪ್ಪಿಗೆ ಪತ್ರ ತಲುಪಿದ 20 ದಿನದೊಳಗಾಗಿ ಕಾರ್ಯಾದೇಶ ಮಾಡಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ KW ನಿಯಮಾವಳಿ ಪ್ರಕಾರ ಇ.ಇಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರ್ ರದ್ದು ಪಡಿಸಲಾಗುವುದು ಹಾಗೂ ಈ ಬಗ್ಗೆ ಮತ್ತ್ಯಾವುದೇ ಪತ್ರ ವ್ಯವಹಾರ ನಡೆಸಲಾಗುವುದಿಲ್ಲ. 10) ಟೆಂಡರ್‌ಕಾಮಗಾರಿ ಪೂರ್ಣಗೊಂಡ ನಂತರ 1 ವರ್ಷಗಳ ಕಾಲ ನಿರ್ವಹಣೆಯ ಜವಾಬ್ದಾರಿ ಗುತ್ತಿಗೆದಾರರ ಆಗಿರುತ್ತದೆ. 11) ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ಮತ್ತು ವಿಶೇಷ ಕಾಯ್ದೆ 2000 ಅಡಿಯಲ್ಲಿ ಗೊತ್ತುಪಡಿಸಿರುವ ಪಾರದರ್ಶಕ ನಿಯಮ, ನಿಬಂಧನೆಗಳು ಹಾಗೂ ಆಡಳಿತಾತ್ಮಕ ಮಂಜೂರಾತಿಯಲ್ಲಿ ವಿಧಿಸಿರುವ ಷರತ್ತುಗಳು ಅನ್ವಯಿಸುತ್ತವೆ.

ಸಹಿ/- ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಂದಗಲ್ಲು, ದಾವಣಗೆರೆ ತಾಲ್ಲೂಕು, ಜಿಲ್ಲೆ.



**ಕರ್ನಾಟಕ ಸರ್ಕಾರ**

## ಗ್ರಾಮ ಪಂಚಾಯತ್ ಕಾರ್ಯಾಲಯ ಕಂದಗಲ್ಲು

ಸಂ:ಗ್ರಾಪಂ:ಕಾ: ಕಂದಗಲ್:ಅ.ಟೆಂ::ಇ-ಪ್ರೊ: 2023-2024 ದಿನಾಂಕ : 15/03/2024

**ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮೂಲಕ)**

ಈ ಗ್ರಾಮ ಪಂಚಾಯತ್ ಕಛೇರಿಯಿಂದ ಕೆಳಕಂಡ ಕಾಮಗಾರಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ಅಭಿವೃದ್ಧಿ, ಗ್ರಾಮ ಪಂಚಾಯತ್ ಕಾರ್ಯಾಲಯ, ಕಂದಗಲ್ಲು, ದಾವಣಗೆರೆ. ಇವರು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖೆ ನಿಯಮಾವಳಿಯ ಮೇರೆಗೆ ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದ್ವಿ-ಲಕೋಟೆ ಟೆಂಡರ್‌ಗಳನ್ನು standard tender documents for procurement of works ನಮೂನೆಯಲ್ಲಿ ಆಹ್ವಾನಿಸಲಾಗಿದೆ.

1) ಖಾಲಿ ಟೆಂಡರ್ ದಾಖಲಾತಿಗಳಿಗಾಗಿ ಅರ್ಜಿ ಸ್ವೀಕರಿಸಿರುವ ಹಾಗೂ ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ : 25.03.2024 ಸಂಜೆ 4.00 ಘಂಟೆಗೆ.

2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿ.: 26.03.2024 ಸಂಜೆ 4.30 ಘಂಟೆಗೆ. 3) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 26.03.2024 ಸಂಜೆ 5.00 ಘಂಟೆಗೆ

| ಕ್ರ. ಸಂ. 01. | ಕಾಮಗಾರಿ ಹೆಸರು 2 | ಟೆಂಡರ್‌ಗೆ ಇಡಲಾಗದ ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ 3 | ಇ.ಎಂ.ಡಿ. ಇಡಲಾಗದ ಒಟ್ಟು ಮೊತ್ತ ರೂ. ಗಳಲ್ಲಿ 4 | ಖಾಲಿ ಟೆಂಡರ್ ಫಾರಂ ಬೆಲೆ (ತೆರಿಗೆ ಸೇರಿಸಿಕೊಂಡು) ರೂ.ಗಳಲ್ಲಿ 5 | ಕಾಮಗಾರಿ ಮುಗಿಸುವ ಅವಧಿ 6 | ಗುತ್ತಿಗೆದಾರರ ಅರ್ಹತೆ 7 | ಟೆಂಡರ್ ನಮೂನೆ 8 | ಮೀಸಲಾತಿ 9 |
|---|---|---|---|---|---|---|---|---|
| 2023-24ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ ಯೋಜನೆ | | | | | | | | |
| 01. | ದಾವಣಗೆರೆ ತಾ॥ ಕಂದಗಲ್ಲು ಗ್ರಾಮದ ಹುಲಿಯಾಳ್ ರೇಣುಕಮ್ಮನ ಮನೆಯಿಂದ ಶ್ಯಾಗಲೆ ಹಳ್ಳದವರೆಗೆ ಬುದು ನೀರು ಸಂಸ್ಕರಿಸುವ (Inline Treatment) ನಿರ್ಮಾಣ. | 7.00 | 17500.00 | ಕೆಪಿಪಿಪಿ ಪೋರ್ಟಲ್ ಪ್ರಕಾರ | 3 ತಿಂಗಳು | 4ನೇ ದರ್ಜೆ ಮತ್ತು ಮೇಲ್ಪಟ್ಟು | KWI | ಸಾಮಾನ್ಯ |
| 02. | ದಾವಣಗೆರೆ ತಾ॥ ಕಂದಗಲ್ಲು ಗ್ರಾಮದ ಹುಚ್ಚಣ್ಣರ ಕಣದಿಂದ ಚಾನಲ್‌ವರೆಗೆ ಸಂಸ್ಕರಿಸುವ ವಿಧಾನ ಕಾಮಗಾರಿ (Inline Treatment) | 7.60 | 19000.00 | ಕೆಪಿಪಿಪಿ ಪೋರ್ಟಲ್ ಪ್ರಕಾರ | 3 ತಿಂಗಳು | 4ನೇ ದರ್ಜೆ ಮತ್ತು ಮೇಲ್ಪಟ್ಟು | KWI | ಸಾಮಾನ್ಯ |
| 03. | ದಾವಣಗೆರೆ ತಾ॥ ಕಂದಗಲ್ಲು ಗ್ರಾಮದ ಬಾದರಗಟ್ಟಿಯವರ ಕಣದಿಂದ ಚಾನಲ್‌ವರೆಗೆ ಸಂಸ್ಕರಿಸುವ ವಿಧಾನ ಕಾಮಗಾರಿ (Inline Treatment) | 6.70 | 16750.00 | ಕೆಪಿಪಿಪಿ ಪೋರ್ಟಲ್ ಪ್ರಕಾರ | 3 ತಿಂಗಳು | 4ನೇ ದರ್ಜೆ ಮತ್ತು ಮೇಲ್ಪಟ್ಟು | KWI | ಸಾಮಾನ್ಯ |

**ಷರತ್ತುಗಳು :** 1) ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯ ಹಾಲಿ ನೋಂದಾಯಿತ ಗುತ್ತಿಗೆದಾರರಾಗಿರಬೇಕು. ಗುತ್ತಿಗೆದಾರರ ನೋಂದಣಿ ಸಂಖ್ಯೆ ಮತ್ತು ದಿನಾಂಕ ಹಾಗೂ GST ಸಂಖ್ಯೆಗಳನ್ನು ನಮೂದಿಸಿರಬೇಕು. 2) ಗುತ್ತಿಗೆದಾರರು ಖಾಲಿ ಟೆಂಡರ್ ಫಾರಂಗಳಿಗೆ ಮತ್ತು EMDಗೆ ನಿಗದಿಪಡಿಸಿದ ಹಣವನ್ನು e-payment ಅಥವಾ NEFT challan ಮೂಲಕ ಸಲ್ಲಿಸತಕ್ಕದ್ದು, ಖಾಲಿ ಟೆಂಡರ್ ಫಾರಂ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ. 3) ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಷರತ್ತು ಮತ್ತು ನಿಬಂಧನೆಗಳನ್ನು ಇ-ಪ್ರೋಟಲ್‌ನಲ್ಲಿ ವಿವರಿಸಿದಂತೆ ಅಪ್ ಲೋಡ್ ಮಾಡುವುದು. 4) ಖಾಲಿ ಟೆಂಡರ್ ಡಾಕ್ಯುಮೆಂಟನ್ನು www.KPPP.karnataka.gov.in ವೆಬ್‌ಸೈಟಿನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ 8970331590 ರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. 5) ಗುತ್ತಿಗೆದಾರರು ನಮೂದಿಸಿದ ದರವು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ವ್ಯತ್ಯಾಸದ ಮೊತ್ತವನ್ನು ಹಾಗೂ KW ನಿಯಮಾನುಸಾರ ಟೆಂಡರ್‌ಕರಾರು ಮಾಡುವ ಮುಂಚೆ ಅನುಮೋದನೆಯಾದ ಮೊತ್ತಕ್ಕೆ ಶೇ. 5 ರಂತೆ ಭದ್ರತಾ ಠೇವಣಿಯನ್ನು FDR ರೂಪದಲ್ಲಿ ನೀಡಬೇಕು. 6) ಸರ್ಕಾರಿ ಆದೇಶದಂತೆ ಲೇಬರ್ ಸೆಸ್ ಶೇ.. 1% ರಂತೆ ಬಿಲ್ಲಿನಲ್ಲಿ ಕಡಿತ ಮಾಡಲಾಗುವುದು. 7) ಕಾಮಗಾರಿಗಳಿಗಾಗಿ ಬೇಕಾಗುವ ಸಿಮೆಂಟ್, ಕಬ್ಬಿಣ ಹಾಗೂ ಇತ್ಯಾದಿ ಸಾಮಗ್ರಿಗಳನ್ನು ಗುತ್ತಿಗೆದಾರರೇ ಸರಬರಾಜು ಮಾಡಿಕೊಳ್ಳಬೇಕಾಗಿರುವುದರಿಂದ, ಸದರಿ ಸಾಮಗ್ರಿಗಳು ಐ.ಎಸ್.ಐ. ತಾಂತ್ರಿಕ ಗುಣಮಟ್ಟ ಹೊಂದಿರಬೇಕು ಹಾಗೂ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಯನ್ನು ಕಾಮಗಾರಿ ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ಗುತ್ತಿಗೆದಾರರೇ ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಸಿ ವರದಿಗಳನ್ನು ಒದಗಿಸಬೇಕು. 8) ಯಾವುದೇ ಕಾರಣವನ್ನು ನೀಡದೇ ಟೆಂಡರ್ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಳ್ಳಲಾಗಿದೆ. ಯಾವುದೇ ಕಾರಣಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಪರ್ಕಜಾಲ (ಆನ್‌ಲೈನ್) ಸಿಗದಿದ್ದರೆ ಈ ಕಛೇರಿಯು ಜವಾಬ್ದಾರಿಯಲ್ಲ. 9) ಟೆಂಡರ್ ಅನುಮೋದನೆಯಾದ ಗುತ್ತಿಗೆದಾರರಿಗೆ ಒಪ್ಪಿಗೆ ಪತ್ರ ತಲುಪಿದ 20 ದಿನದೊಳಗಾಗಿ ಕಾರ್ಯಾದೇಶ ಮಾಡಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ KW ನಿಯಮಾವಳಿ ಪ್ರಕಾರ ಇ.ಇಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರ್ ರದ್ದು ಪಡಿಸಲಾಗುವುದು ಹಾಗೂ ಈ ಬಗ್ಗೆ ಯಾವುದೇ ಪತ್ರ ವ್ಯವಹಾರ ನಡೆಸಲಾಗುವುದಿಲ್ಲ. 10) ಟೆಂಡರ್‌ಕಾಮಗಾರಿ ಪೂರ್ಣಗೊಂಡ ನಂತರ 1 ವರ್ಷಗಳ ಕಾಲ ನಿರ್ವಹಣೆಯ ಜವಾಬ್ದಾರಿ ಗುತ್ತಿಗೆದಾರರವರದ್ದೇ ಆಗಿರುತ್ತದೆ. 11) ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ಮತ್ತು ವಿಶೇಷ ಕಾಯ್ದೆ 2000 ಅಡಿಯಲ್ಲಿ ಗೊತ್ತುಪಡಿಸಿರುವ ಪಾರದರ್ಶಕ ನಿಯಮ, ನಿಬಂಧನೆಗಳು ಹಾಗೂ ಆಡಳಿತಾತ್ಮಕ ಮಂಜೂರಾತಿಯಲ್ಲಿ ವಿಧಿಸಿರುವ ಷರತ್ತುಗಳು ಅನ್ವಯಿಸುತ್ತವೆ.

ಸಹಿ/- ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಂದಗಲ್ಲು, ದಾವಣಗೆರೆ ತಾಲ್ಲೂಕು, ಜಿಲ್ಲೆ.


## ಹೊಸ ಕುಂದುವಾಡದ ಮಂಜು ನಿಧನ



ದಾವಣಗೆರೆ ಜಿಲ್ಲಾ ಕಿಚ್ಚ ಸುದೀಪ್ ಸೇನಾ ಸಮಿತಿ ಜಿಲ್ಲಾ ಅಧ್ಯಕ್ಷರು, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಯುವ ಮುಖಂಡರೂ ಆದ **ಮಂಜುನಾಥ ಕುಂದುವಾಡ** ಅವರು ಇಂದು ಹೊಸಕುಂದವಾಡದಲ್ಲಿ ದಿನಾಂಕ 16.03.2024ರ ಬೆಳಿಗ್ಗೆ 11 ಗಂಟೆಗೆ ನಿಧನರಾದರು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.03.2024ರ ಭಾನುವಾರ ಮದ್ಯಾಹ್ನ 12 ಗಂಟೆಗೆ ಹಳೇ ಕುಂದುವಾಡದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**- ದುಃಖತಪ್ತ ಕುಟುಂಬ ವರ್ಗ, ಮೊ: 9964693049**

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾ. ಕಮ್ಮತ್ತಹಳ್ಳಿ ಗ್ರಾಮದ ವಾಸಿ **ಶ್ರೀ ಮಂಜುನಾಥ ಕೆ.ಸಿ. ಮತ್ತು ಸಹೋದರಿಯರು** ಮಾಡುವ ವಿಜ್ಞಾಪನೆಗಳು. ದಿನಾಂಕ 14.03.2024ನೇ ಗುರುವಾರ ರಾತ್ರಿ 8.30ಕ್ಕೆ ದಿ. ಎಂ. ಚನ್ನಪ್ಪನವರ ಧರ್ಮಪತ್ನಿಯಾದ

**ಶ್ರೀಮತಿ ಸಿ.ಪುಷ್ಪಾವತಿಯವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 18.03.2024ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ವಿರಕ್ತಮಠ, ಕಮ್ಮತಹಳ್ಳಿ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**: ದುಃಖತಪ್ತ ಕುಟುಂಬ ವರ್ಗ :**

**ಶ್ರೀಮತಿ ಲೀಲಾ ಕೆ.ಸಿ. ಶ್ರೀ ನಂದೀಶ್ ಆರ್.ಎಂ. ಹಾಗೂ ಮಕ್ಕಳು**

**ಶ್ರೀಮತಿ ಮಮತಾ ಕೆ.ಸಿ. ಶ್ರೀ ಸೂರಜ್ ಕೆ.ವಿ. ಹಾಗೂ ಮಕ್ಕಳು**

**ಶ್ರೀಮತಿ ರಶ್ಮಿ ಆರ್.ಎಂ. ಶ್ರೀ ಮಂಜುನಾಥ್ ಕೆ.ಸಿ. ಹಾಗೂ ಮಕ್ಕಳು**

**ಮಾದಿಹಳ್ಳಿ, ಕೋರಿ ವಂಶಸ್ಥರು ಕಮ್ಮತಹಳ್ಳಿ ಹಾಗೂ ಬಂಧು-ಮಿತ್ರರು. ಮೊ : 99162 60576**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 16-03-2024ರ ಶನಿವಾರ ನಿಧನರಾದ ಮಾಜಿ ಶಿಕ್ಷಣ ಸಚಿವರೂ, ಆರ್ಯವೈಶ್ಯ ಮಹಾಜನ ಸಮಿತಿಯ ಉಪಾಧ್ಯಕ್ಷರೂ ಆದ **ಶ್ರೀಮತಿ ನಾಗಮ್ಮ ಕೇಶವಮೂರ್ತಿ** ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಕೋರಿ ಮೃತರ ಕುಟುಂಬ ವರ್ಗದವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುವ...

**ಎಸ್.ಟಿ. ಕುಸುಮಶೆಟ್ರು ಮತ್ತು ಮಕ್ಕಳು**

ವರ್ತಕರು, ದಾವಣಗೆರೆ.

## ಐದನೇ ವರ್ಷದ ಸವಿನೆನಪು



**ಶ್ರೀಮತಿ ದಿ॥ ಎಂ.ಎಂ. ಸೌಭಾಗ್ಯ ಲಕ್ಷ್ಮಿ**

ನೀವು ನಮ್ಮನ್ನಗಲಿ ಐದು ವರ್ಷಗಳು ಸಂದವು, ಸದಾ ನಿಮ್ಮ ಸ್ಮರಣೆಯಲ್ಲಿರುವ...

- ಶ್ರೀಮತಿ ವಿದ್ಯಾಶ್ರೀ ಪಿ ಮತ್ತು ಎಂ.ಎಂ. ರವಿಚಂದ್ರ
- ಶ್ರೀಮತಿ ಎಂ.ಎಂ. ಛಾಯಾ ಮತ್ತು ರಜತ್ ಬಿ.ಆರ್
- ಶ್ರೀಮತಿ ಎಂ.ಎಂ. ರಾಜಲಕ್ಷ್ಮಿ ಮತ್ತು ಶ್ರೀ ಪವನಕುಮಾರ್
- ಶ್ರೀಮತಿ ಎಂ.ಎಂ. ಸರಸ್ವತಿ ಮತ್ತು ಶ್ರೀ ರುದ್ರೇಶ್

ಮೊಮ್ಮಕ್ಕಳಾದ : ✤ ಅರ್ವಿ ಎಂ.ಆರ್., ✤ ರಿಷನ್, ✤ ವಿಷ್ಣು ಬಿ.ಆರ್., ✤ ವಿವಾನ್ ಪಿ.ಎಸ್., ✤ ಸಾಯಿ ಪ್ರಣವ್ ಆರ್.ಬಿ. ✤ ಆರ್ಯನ್ ಆರ್.ಬಿ.

**ಎಂ.ಆರ್. ಮಂಜುನಾಥ್ ಶೆಟ್ಟಿ & ಸನ್ಸ್**

667/1, ಕೆನರಾ ಬ್ಯಾಂಕ್ ಎದುರು, ಕೆ.ಆರ್. ರಸ್ತೆ, ದಾವಣಗೆರೆ-1. ಫೋ. : 98442 14803

# ಜನ್ಮದಿನದ ಹಾರ್ದಿಕ ಶುಭಾಶಯಗಳು



ಮೊನ್ನೆ ಮಾರ್ಚ್ 15ರಂದು ತಮ್ಮ ಜನ್ಮದಿನವನ್ನು ಆಚರಿಸಿಕೊಂಡ ಎಸ್.ಎಸ್.ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿಗಳು, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸುತ್ತಿರುವ ಬಡವರ ಪಕ್ಷಪಾತಿಗಳು, ಜನಾನುರಾಗಿಗಳು ಆದ

**ಡಾ|| ಪ್ರಭಾ ಮಲ್ಲಿಕಾರ್ಜುನ್** ಅವರಿಗೆ ಜನ್ಮದಿನದ ಹೃದಯ ಪೂರ್ವಕ ಶುಭಾಶಯಗಳು.


**ಹಾಗೆಯೇ ಇಂದು ತಮ್ಮ 61ನೇ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರುವ**

ಅಭಿವೃದ್ಧಿಯ ಹರಿಕಾರರು, ಕ್ರೀಡಾ ಪ್ರೋತ್ಸಾಹಕರು, ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರು, ಫುಟ್‌ಬಾಲ್, ಕೇರಂ, ಚೆಸ್ ಹಾಗೂ ಅಡ್ವೆಂಚರ್ಸ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷರು, ಲಯನ್ಸ್ ಕ್ಲಬ್ ಅಧ್ಯಕ್ಷರು (2009-10), ದಾವಣಗೆರೆ ಕ್ರಿಕೆಟ್ ಕ್ಲಬ್ ಕಾರ್ಯದರ್ಶಿಗಳು, ಕರ್ನಾಟಕ ಕ್ರಿಕೆಟ್ ಅಸೋಸಿಯೇಶನ್ ಸದಸ್ಯರು, ದಾವಣಗೆರೆ ನಗರಸಭೆಯ ಮಾಜಿ ಅಧ್ಯಕ್ಷರು, ಮಾಜಿ ಕಾರ್ಪೋರೇಟರ್ ಹಾಗೂ ನಮ್ಮೆಲ್ಲರ ಆಪ್ತ ಮಿತ್ರರಾದ


ಸನ್ಮಾನ್ಯ **ಶ್ರೀ ದಿನೇಶ್ ಕೆ ಶೆಟ್ಟಿ** ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು



**ಡಾ. ಅಥಣಿ ವೀರಣ್ಣ**
ಹಿರಿಯ ಲೆಕ್ಕ ಪರಿಶೋಧಕರು



**ಅಣಬೇರು ರಾಜಣ್ಣ**
ಹೋಟೆಲ್ ಉದ್ಯಮಿಗಳು



**ಎಸ್.ಕೆ.ವೀರಣ್ಣ**
ವರ್ತಕರು




**ಡಿ.ಡಿ.ಬಸವರಾಜಪ್ಪ**
ಉದ್ಯಮಿಗಳು



**ಡಾ. ಉದಯ ಶಿವಕುಮಾರ್**
ಉದ್ಯಮಿಗಳು



**ಡಾ|| ಸುರೇಂದ್ರ ಶೆಟ್ಟಿ**
ಹಿರಿಯ ವೈದ್ಯರು



**ಡಾ|| ದೀಪಕ್ ಬೋಂದಾಡೆ**
ಹಿರಿಯ ವೈದ್ಯರು



**ಎಸ್.ಎಲ್.ಆನಂದಪ್ಪ**
ಉದ್ಯಮಿಗಳು



**ಸುರಭಿ ಶಿವಮೂರ್ತಿ**
ಸಮಾಜ ಸೇವಕರು



**ಬಿ.ಎನ್.ಮಲ್ಲೇಶ್**
ಹಿರಿಯ ಪತ್ರಕರ್ತರು



**ಕುರುಡಿ ಗಿರೀಶ್**
ಕ್ರೀಡಾ ಪ್ರೋತ್ಸಾಹಕರು

## ಎಸ್.ಎಸ್.ಆಪ್ತ ಒಡನಾಡಿಗಳ ಬಳಗ, ದಾವಣಗೆರೆ







# 'ದಾವಣಗೆರೆ ಮದರ್ ಥೆರೇಸಾ' ನಾಗಮ್ಮ ಕೇಶವಮೂರ್ತಿ ಇನ್ನಿಲ್ಲ

**(1ನೇ ಪುಟದಿಂದ)** ಪ್ರೇರಣೆಯಿಂದ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1955ರಲ್ಲಿ ವನಿತಾ ಸಮಾಜವನ್ನು ಸ್ಥಾಪಿಸಿದ ಅವರು, ಆ ಸಂಸ್ಥೆಯಡಿಯಲ್ಲಿ 52 ಅಂಗ ಸಂಸ್ಥೆಗಳನ್ನು ಆರಂಭಿಸಿ ಇಂದಿಗೂ ಯಶಸ್ವಿಯಾಗಿ ನಡೆಸುತ್ತಿದ್ದರು.

1968ರಲ್ಲಿ ದಾವಣಗೆರೆ ನಗರಸಭೆ ಸದಸ್ಯರಾಗಿ ಆಯ್ಕೆಯಾಗುವುದರ ಮೂಲಕ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದ ನಾಗಮ್ಮ ಕೇಶವಮೂರ್ತಿ, 1972ರಲ್ಲಿ ದಾವಣಗೆರೆ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಚುನಾಯಿತಗೊಂಡರು. ಅಲ್ಲಿಂದ, 1981ರಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಮತ್ತೆ ಆಯ್ಕೆಯಾದ ಅವರು, ಆ ಅವಧಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿದ್ದರು.

1988ರಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಮತ್ತೊಂದು ಅವಧಿಗೆ ಶಾಸಕರಾಗಿ ಜಯಶೀಲರಾಗಿದ್ದ ಅವರು, ಆ ಅವಧಿಯಲ್ಲೂ ವಿಧಾನಸಭೆ ಉಪ ಸಭಾಪತಿಯಾಗಿ, ಭಾರೀ ಕೈಗಾರಿಕಾ ಖಾತೆ ಸಚಿವರಾಗಿ ನಂತರ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಮಾಜಿ ಮುಖ್ಯಮಂತ್ರಿಗಳಾಗಿದ್ದ ಆರ್. ಗುಂಡೂರಾವ್ ಮತ್ತು ವೀರಪ್ಪ ಮೊಯ್ಲಿ ಅವರುಗಳ ಸಚಿವ ಸಂಪುಟದಲ್ಲಿ ನಾಗಮ್ಮ ಅವರು ಸಚಿವ ಖಾತೆಯನ್ನು ಸಮರ್ಥವಾಗಿ ನಿಭಾಯಿಸಿದ್ದರು. ನಂತರದ ದಿನಗಳಲ್ಲಿ ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ನಂತರದ ದಿನಗಳಲ್ಲಿ ಅನಾರೋಗ್ಯಕ್ಕೊಳಗಾಗಿದ್ದ



ಅವರು, ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದರು.

**ವನಿತಾ ಸಮಾಜದ ಆತ್ಮ :** 'ಸೇವೆಯೇ ಪರಮೋರ್ಮಹ' ಎಂಬ ಧ್ಯೇಯ ವಾಕ್ಯದಡಿ ಗರ್ಭದಲ್ಲಿರುವ ಮಗುವಿನಿಂದ ಹಿಡಿದು ಸಾಯುವ ಹಂತದವರೆಗೆ ಮಹಿಳೆಗೆ ಎಲ್ಲಾ ರೀತಿಯ ನೆರವು, ಸೌಲಭ್ಯ, ಸ್ವಾವಲಂಬನೆಗೆ ದಾರಿ ಮಾಡಿ ಕೊಟ್ಟಿದ್ದ ನಾಗಮ್ಮನವರು, ದಾವಣಗೆರೆಯ ಮದರ್ ಥೆರೆಸಾ ಎಂದೇ ಖ್ಯಾತರಾಗಿದ್ದರು. ವನಿತಾ ಸಮಾಜವೇ ಅವರ ನಿಜವಾದ ಆತ್ಮವಾಗಿತ್ತು ಎನ್ನುವಷ್ಟರ ಮಟ್ಟಿಗೆ ಆ ಸಂಸ್ಥೆಯನ್ನು ಮುನ್ನಡೆಸುವುದರ ಮೂಲಕ ರಾಜ್ಯದಲ್ಲೇ ಮಾದರಿ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ.



**ಪ್ರೇಮಾಲಯ, ವೃದ್ಧಾಶ್ರಮ :** ಅನಾಥ ಮಕ್ಕಳಿಗಾಗಿ ಪ್ರೇಮಾಲಯ, ವಯೋವೃದ್ಧರಿಗೆ ವೃದ್ಧಾಶ್ರಮ, ಕಿವುಡ ಮೂಕ ಮಕ್ಕಳಿಗೆ ವಾಕ್ ಶ್ರವಣ ಕೇಂದ್ರ, ವೃತ್ತಿ ನಿರತ ಮಹಿಳೆಯರಿಗೆ ಶಿಲ್ಪಾಲಯ ಹೀಗೆ ಅನೇಕ ವಸತಿ ನಿಲಯಗಳನ್ನು ಸ್ಥಾಪಿಸಿದ ಹೆಗ್ಗಳಿಕೆ ಅವರದಾಗಿತ್ತು. ದಾವಣಗೆರೆಯ ವಿವಿಧ ವರ್ಗಗಳ ಎಲ್ಲಾ ಮಹಿಳೆಯರನ್ನು ಒಟ್ಟುಗೂಡಿಸಿ, ಅವರಿಂದ ಸೇವಾ ಕಾರ್ಯಕ್ರಮಗಳನ್ನು ಮಾಡಿಸುತ್ತಿದ್ದ ನಾಗಮ್ಮನವರು, ಮದರ್ ಥೆರೇಸಾ, ಕಿರಣ್ ಬೇಡಿ ಅವರನ್ನು ಭೇಟಿ ಮಾಡಿ ವನಿತಾ ಸಮಾಜಕ್ಕೂ ಆಹ್ವಾನಿಸಿದ್ದರು.

ರಾಜಕೀಯ, ಶಿಕ್ಷಣ, ಸಮಾಜ ಸೇವೆ, ಮಹಿಳಾ ಜಾಗೃತಿ, ಸಂಗೀತ,

### ಪ್ರಶಸ್ತಿ ಪುರಸ್ಕಾರಗಳು...

1994- ಯಂಗ್ ಇಂಡಿಯಾ ಅವಾರ್ಡ್
2001-ಯಶೋಧರಾ ದಾಸಪ್ಪ ಪ್ರಶಸ್ತಿ
2003- ಕರ್ನಾಟಕ ಸರ್ಕಾರದ ಕಿತ್ತೂರು ಚೆನ್ನಮ್ಮ ಪ್ರಶಸ್ತಿ
2010- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
2010- ಪುಟ್ಟಪರ್ತಿ ಸಾಯಿಬಾಬಾ ಅವರಿಂದ 'ಈಶ್ವರಮ್ಮ ಪುರಸ್ಕಾರ'
2012- ಬಿಜಾಪುರ ಮಹಿಳಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್

ಸಾಹಿತ್ಯ, ಹಾಸ್ಯ, ಅಧ್ಯಾತ್ಮ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ನಿರಂತರವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ನಾಗಮ್ಮನವರು ಜನ ಮೆಚ್ಚಿದ ನಾಯಕಿಯಾಗಿದ್ದರು.

**ರಾಷ್ಟ್ರಮಟ್ಟದಲ್ಲಿ :** ರಾಜಕೀಯ ಪ್ರವೇಶದ ನಂತರ ರಾಷ್ಟ್ರಮಟ್ಟದಲ್ಲಿ ಮಾಜಿ ಪ್ರಧಾನಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಮಾಜಿ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು, ಎಸ್. ನಿಜಲಿಂಗಪ್ಪ, ಮಾಜಿ ಸಚಿವರಾದ ಮಾರ್ಗರೇಟ್ ಆಳ್ವ, ಆಸ್ಕರ್ ಫರ್ನಾಂಡಿಸ್ ಮುಂತಾದವರ ಆತ್ಮೀಯ ಒಡನಾಡಿಯಾಗಿದ್ದರು.

ಪುಟ್ಟಪರ್ತಿ ಸಾಯಿಬಾಬಾ ಅವರ ಅಪ್ರತಿಮ ಭಕ್ತರಾಗಿದ್ದ ನಾಗಮ್ಮನವರು, ಅವರ ಆಶೀರ್ವಾದ ಪಡೆದೇ ಎಲ್ಲಾ ಕಾರ್ಯಕ್ಕೂ ಕೈ ಹಾಕುತ್ತಿದ್ದರು.

### ಹರಪನಹಳ್ಳಿ ಬಿಜೆಪಿ ಎರಡು ಬಣಗಳ ಮಧ್ಯೆ ಹೈಡ್ರಾಮಾ

## ಕರುಣಾಕರ ರೆಡ್ಡಿ ಬಣದಿಂದ 'ಗೋ ಬ್ಯಾಕ್' ಸಿದ್ದೇಶ್ ಘೋಷಣೆ

ಹರಪನಹಳ್ಳಿ.ಮಾ.16- ಲೋಕಸಭಾ ಚುನಾವಣೆಯ ದಿನಾಂಕ ಘೋಷಣೆಯಾಗುವ ಮುನ್ನವೇ ಇಲ್ಲಿಯ ಭಾರತೀಯ ಜನತಾ ಪಕ್ಷದಲ್ಲಿನ ಭಿನ್ನಮತ ಸ್ಫೋಟವಾಗಿ ಮಾತಿನ ಚಕಮಕಿ, ವಾಗ್ವಾದ, ಗೊಂದಲಕ್ಕೆ ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದ ಬಿಜೆಪಿ ಮಂಡಲ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ಸಾಕ್ಷಿಯಾಯಿತು.

ಬೆಳಿಗ್ಗೆ 11 ಗಂಟೆಗೆ ಪದಗ್ರಹಣ ಕಾರ್ಯಕ್ರಮ ನಿಗದಿಯಾಗಿತ್ತು, ಕೆಲವೊಂದು ಮುಖಂಡರು, ಕಾರ್ಯಕರ್ತರು ಕಲ್ಯಾಣ ಮಂಟಪದಲ್ಲಿ ಮುಂಚಿತವಾಗಿ ತೆರಳಿ ಆಸೀನರಾಗಿದ್ದರು.

11.30ಕ್ಕೆ ಸರಿಯಾಗಿ ಬಿಜೆಪಿ ಕಾರ್ಯಕರ್ತರು, ಮುಖಂಡರಾದ ಜಿ. ನಂಜನಗೌಡ, ಮಂಡಲ ಅಧ್ಯಕ್ಷ ಕೆ.ಲಕ್ಷ್ಮಣ ಸೇರಿದಂತೆ ಕಾರ್ಯಕರ್ತರು ಬೈಕ್ ರ್‍ಯಾಲಿ ಮೂಲಕ ಸಮಾರಂಭ ನಡೆಯುವ ಕಲ್ಯಾಣ ಮಂಟಪಕ್ಕೆ ಆಗಮಿಸಿದರು.

ಮುಂಚಿತವಾಗಿಯೇ ಆಗಮಿಸಿದ್ದ ಮಾಜಿ ಶಾಸಕ ಜಿ.ಕರುಣಾಕರ ರೆಡ್ಡಿ ಬಣದವರೆನ್ನಲಾದ ನೀಲಗುಂದ ಟಿ. ಮನೋಜ್ ಕುಮಾರ್ ತಳವಾರ, ಆರ್.ಲೋಕೇಶ, ಶಿಂಗ್ರಿಹಳ್ಳಿ ನಾಗರಾಜ, ಮ್ಯಾಕಿ ದುರುಗಪ್ಪ. ಕವಸರ



ನಾಗರಾಜ, ಜೋಗಿ ಬಸವರಾಜ, ಬಿ.ಆರ್. ಕೊಟ್ರೇಶ್, ಜಾತಪ್ಪ ಸೇರಿದಂತೆ ಅನೇಕರು ಗೇಟಿನ ಬಾಗಿಲು ಹಾಕಿ 'ಸಿದ್ದೇಶ್ವರ ಗೋಬ್ಯಾಕ್' ಎಂದು ಕೂಗುತ್ತಾ ಪ್ರತಿಭಟನೆಗೆ ಇಳಿದರು. ಈ ಸಂದರ್ಭದಲ್ಲಿ ಕರುಣಾಕರ ರೆಡ್ಡಿ ಬಣದವರಿಗೂ ಹಾಗೂ ಸಿದ್ದೇಶ್ವರ ಪರವಾಗಿರುವ ಮುಖಂಡ ಜಿ.ನಂಜನಗೌಡ ಇತರರು ಕಲ್ಯಾಣ ಮಂಟಪದ ಒಳಗೆ ಹೋಗಲು ಪ್ರಯತ್ನಿಸಿದಾಗ ನೂಕಾಟ, ತಳ್ಳಾಟ, ವಾಗ್ವಾದ ಜರುಗಿತು.

ಸ್ವಲ್ಪ ಹೊತ್ತು ಹೀಗೆ ನಡೆದಾಗ, ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಪತ್ನಿ ಲೋಕಸಭಾ ಕ್ಷೇತ್ರದ ಅಧಿಕೃತ ಅಭ್ಯರ್ಥಿ ಗಾಯಿತ್ರಿ, ಹರಿಹರ ಶಾಸಕ ಬಿ.ಪಿ.ಹರೀಶ್, ಹಡಗಲಿ ಶಾಸಕ ಕೃಷ್ಣನಾಯ್ಕ ಮುಂತಾದ ಮುಖಂಡರು ಆಗಮಿಸಿದರು.

ಆಗಲೂ ಸಹ ಯಾರಿಗೂ ಒಳಗೆ ಬಿಡದೇ ಅಡ್ಡ ನಿಂತು ಪ್ರತಿಭಟನೆ ಮುಂದುವರೆಸಿದರು.

ಬಹಳ ಹೊತ್ತಿನ ನಂತರ ಅಂತಿಮವಾಗಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಅಭ್ಯರ್ಥಿ ಗಾಯತ್ರಿ, ಬಿಜೆಪಿ ಶಾಸಕರುಗಳು , ಮುಖಂಡರು ಹಿಂಬಾಗಿಲ ಮೂಲಕ ಕಲ್ಯಾಣ ಮಂಟಪ ಪ್ರವೇಶಿಸಿ ವೇದಿಕೆಯಲ್ಲಿ ಆಸೀನರಾದರು.

ಆಗ ವೇದಿಕೆಗೂ ನುಗ್ಗಿದ ಕರುಣಾಕರ ರೆಡ್ಡಿ ಬಣದ ಕಾರ್ಯಕರ್ತರು ವಾಗ್ವಾದಕ್ಕಿಳಿದರು, ದಿಕ್ಕಾರದ ಘೋಷಣೆ ಕೂಗಲು ಆರಂಭಿಸಿದರು. ಅಂತಹ ಗದ್ದಲದಲ್ಲಿಯೇ ಸಿದ್ದೇಶ್ವರ, ಅಭ್ಯರ್ಥಿ ಗಾಯತ್ರಿ ಮಾತನಾಡಿದರು.

ಕೊನೆಗೆ ಗದ್ದಲ ಜೋರಾದಾಗ ಪೋಲೀಸರು ಕರುಣಾಕರ ರೆಡ್ಡಿ ಬಣದ ಕಾರ್ಯಕರ್ತರನ್ನು ಬಲವಂತವಾಗಿ ಹೊರಗೆ ಕಳಿಸಿ ಗೇಟ್ ಹಾಕಿದರು. ಸಿಪಿಐ ಸಾಬಯ್ಯನಾಯಕ, ಪಿಎಸ್ಐ ಶಂಭುಲಿಂಗ ಹಿರೇಮಠ, ಕಿರಣ್ ಕುಮಾರ ಸಿಬ್ಬಂದಿ ಗಲಾಟೆ ತಹಬಂದಿಗೆ ತಂದರು.

ನಂತರ ಕಾರ್ಯಕ್ರಮ ಉದ್ಘಾಟನೆ ಹಾಗೂ ನೂತನ ಮಂಡಲ ಅಧ್ಯಕ್ಷರಿಗೆ ಧ್ವಜ ಹಸ್ತಾಂತರ ಜರುಗಿತು.

## ಮತಯಂತ್ರ ಟೀಕೆಗೆ ಕವಿತೆಯ ಉತ್ತರ !

ನವದೆಹಲಿ, ಮಾ. 16 – ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಲೋಕಸಭಾ ಚುನಾವಣೆ ದಿನಾಂಕ ಪ್ರಕಟಿಸುವ ವೇಳೆ ಮತಯಂತ್ರ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಕವಿತೆಗಳ ಮೂಲಕವೇ ಉತ್ತರ ನೀಡಿದ್ದಾರೆ.

'ಅಧೂರಿ ಹಸರತೋ ಕಾ ಇಲ್ಜಾಮ್ ಹರ್ ಬಾರ್ ಹಮ್ ಪರ್ ಲಗಾನಾ ಠೀಕ್ ನಹಿ' ಎಂಬ ಕವನದ ಮೂಲಕ ಅವರು ಇ.ವಿ.ಎಂ. ಕುರಿತ ಟೀಕೆಗಳಿಗೆ ಉತ್ತರಿಸಿದರು. ನಿಮ್ಮ ಕೆಲಸ ನೀವು ಸರಿಯಾಗಿ ಮಾಡದೇ ಚುನಾವಣಾ ಆಯೋಗ ವನ್ನು ದೂಷಿಸುವುದು ಸರಿಯಲ್ಲ ಎಂಬುದು ಈ ಕವನದ ಅರ್ಥವಾಗಿತ್ತು. ಮತಯಂತ್ರಗಳನ್ನು ಬಳಸಿದಾಗ ಆಡಳಿತಾರೂಢ ಪಕ್ಷಗಳೂ ಸೋತಿವೆ ಎಂದೂ ಕುಮಾರ್ ತಿಳಿಸಿದರು.

ಚುನಾವಣೆ ಸಂದರ್ಭದಲ್ಲಿ ಅತಿಯಾದ ದ್ವೇಷ ಬೇಡ ಎಂದು ಹೇಳುವಾಗ ಅವರು ಬಶೀರ್ ಬದ್ರ್ ಅವರ 'ದುಶ್ಮನಿ ಜಮ್ ಕೆ ಕರೋ, ಲೇಕಿನ್ ಯೇ ಗುಂಜಾಯಿಶ್ ರಹೆ, ಜಬ್ ಕಭಿ ಹಮ್ ದೋಸ್ತ್ ಹೋ ಜಾಯೆ ತೋ ಶರ್ಮಿಂದ ನಾ ಹೋ' ಎಂಬ ದ್ವಿಪದಿಯನ್ನು ಉಲ್ಲೇಖಿಸಿದರು.

ನೀವು ಬದ್ಧ ಶತ್ರುಗಳೇ ಆಗಿರ ಬಹುದು, ಆದರೆ, ಮುಂದೊಂದು ಕಾಲದಲ್ಲಿ ಸ್ನೇಹಿತರಾದಾಗ ಹಳೆಯ ದಿನಗಳು ನಾಚಿಕೆ ತರುವಂತಿರಬಾರದು ಎಂಬುದು ಈ ಸಾಲಿನ ಅರ್ಥ. ಚುನಾವಣಾ ಸಮ ಯದಲ್ಲಿ ಶತ್ರುಗಳಾಗಿರುವವರು, ನಂತರ ಮಿತ್ರ ರಾಗುವ ಬಗ್ಗೆ ಅವರು ಈ ಸಾಲು ಉಲ್ಲೇಖಿಸಿದರು. ರಹೀಮ್ ಅವರ 'ರಹಿಮನ್ ಧಾಗಾ ಪ್ರೇಮ್ ಕಾ, ಮತ್ ತೋಡೋ ಚಾಟ್ಕೆ, ಟೂಟೆ ಪೆ ಫಿರ್ ನಾ ಜುಡೆ, ಜುಡೆ ಗಾಠ್ ಪರಿ ಚಾಯೆ' ಎಂಬ ದ್ವಿಪದಿಯನ್ನೂ ಉಲ್ಲೇಖಿಸಿದರು.

ಪ್ರೀತಿ ಎಂಬ ದಾರವನ್ನು ಕತ್ತರಿಸಬೇಡಿ. ಕತ್ತರಿಸಿದ ಮೇಲೆ ಈ ದಾರವನ್ನು ಕೂಡಿಸಿದರೂ ಸಹ ಗಂಟು ಉಳಿದು ಬಿಡುತ್ತದೆ ಎಂಬುದು ಈ ದ್ವಿಪದಿಯ ಅರ್ಥ.

ಸುಳ್ಳು ಸುದ್ದಿಯ ಬಗ್ಗೆಯೂ ಮಾತನಾಡಿದ ಕುಮಾರ್, 'ಝೂಠ್ ಕೆ ಬಾಜಾರ್ ಮೇ ರೌನಕ್ ಬಹುತ್ ಹೈ, ಗೊಯಾ ಬುಲ್ಬುಲೆ ಜೈಸಿ ತುರಂತ್ ಹಿ ಫಟ್ ಜಾತಿ ಹೈ ಪಕಡ್ ಭಿ ಲೊಗೆ ತೊ ಕ್ಯಾ ಹಾಸಿಲ್ ಹೋಗಾ ಸಿವಾಯೆ ಧೋಕೆ ಕೆ' ಎಂದು ಹೇಳಿದರು. ಸುಳ್ಳಿನ ಜಗತ್ತು ಆಕರ್ಷಕವಾಗಿ ಕಾಣಬುದು. ಆದರೆ, ಇದು ಕ್ಷಣಭಂಗುರ. ಇಲ್ಲಿ ಸಾಧಿಸಿ ದರೂ ಕೊನೆಗೆ ಮೋಸದ ಹೊರತಾಗಿ ಬೇರೇನೂ ಸಿಗದು ಎಂಬುದು ಈ ಸಾಲುಗಳ ಅರ್ಥವಾಗಿದೆ.

## ನಗರದಲ್ಲಿ ಇಂದು ಶ್ರೀ ರಾಘವೇಂದ್ರ ಸಪ್ತಾಹದ ಸಮಾರೋಪ

ಶ್ರೀ ರಾಘವೇಂದ್ರ ಸಪ್ತಾಹ ಕಾರ್ಯಾಚರಣೆ ಸಮಿತಿ, ಮಂತ್ರಾಲಯ ಹಾಗೂ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದ ಸಮಾರೋಪ ಸಮಾರಂಭ ಹಾಗೂ ಶ್ರೀ ಶ್ರೀನಿವಾಸ ಕಲ್ಯಾಣ ವಿಶೇಷ ಕಾರ್ಯಕ್ರಮ ಇಂದು ಸಂಜೆ 6 ರಿಂದ 8 ಗಂಟೆಯವರೆಗೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್ ಆಗಮಿಸಲಿದ್ದಾರೆ. ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು, ಶ್ರೀ ವಿದ್ಯಾರಾಜೇಶ್ವರ ತೀರ್ಥ ಶ್ರೀಪಾದಂಗಳವರು, ಶ್ರೀ ಸುಜಯನಿಧಿ ತೀರ್ಥ ಶ್ರೀಪಾದಂಗಳವರು ಸಾನ್ನಿಧ್ಯ ವಹಿಸಲಿದ್ದಾರೆ.

## ನಗರದಲ್ಲಿ ಇಂದಿನಿಂದ ದುಗ್ಗಮ್ಮನ ಜಾತ್ರೆ



ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವವು ಇಂದಿನಿಂದ ಆರಂಭವಾಗಲಿದೆ.

ಇಂದು ಬೆಳಿಗ್ಗೆ ಶ್ರೀ ದೇವಿಗೆ ಪಂಚಾಮೃತಾಭಿಷೇಕ, ಕಂಕಣ ಧಾರಣೆ, ರಾತ್ರಿ ಸಾರು ಹಾಕುವುದು, ನಾಡಿದ್ದು ದಿನಾಂಕ 19ರ ಮಂಗಳವಾರ ಬೆಳಿಗ್ಗೆ ವಿಶೇಷ ಪೂಜೆ, ರಾತ್ರಿ 9ಕ್ಕೆ ಶ್ರೀ ಅಮ್ಮನವರಿಗೆ ಭಕ್ತಿ ಸಮರ್ಪಣೆ, ರಾತ್ರಿ 9 ಗಂಟೆಗೆ ಸಾಂಸ್ಕೃತಿಕ ಮೇಳ, ಸಿಡಿ ಮದ್ದಿನ ಪ್ರದರ್ಶನ, ಬೆಳ್ಳಿಯ ರಥದಲ್ಲಿ ಅಮ್ಮನವರ ಮೆರವಣಿಗೆ, ದಿನಾಂಕ 20ರ ಬುಧವಾರ ಶ್ರೀ ದೇವಿಯ ಮಹಾಪೂಜಾ ಕಾರ್ಯಕ್ರಮ, ಬೆಳಿಗ್ಗೆ ಚರಗ ಚೆಲ್ಲುವ ಕಾರ್ಯಕ್ರಮಗಳು ಜರುಗಲಿವೆ.

## ತಾರೇಹಳ್ಳಿಯಲ್ಲಿ ರಂಗನಾಥ ಸ್ವಾಮಿ ರಥೋತ್ಸವ

ಜಗಳೂರು ತಾಲ್ಲೂಕಿನ ತಾರೇಹಳ್ಳಿ ಗ್ರಾಮದಲ್ಲಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಮಹಾರಥೋತ್ಸವವು ಇದೇ ದಿನಾಂಕ 20ರ ಬುಧವಾರ ಸಂಜೆ 6.30ಕ್ಕೆ ನಡೆಯಲಿದೆ. ರಥೋತ್ಸವದ ಪ್ರಯುಕ್ತ ಇಂದು ಸರ್ಪ ವಾಹನ ಉತ್ಸವ, ನಾಳೆ ಸೋಮವಾರ ಗಜ ವಾಹನ ಉತ್ಸವ, ದಿನಾಂಕ 19ರ ಮಂಗಳವಾರ ಗರುಡ ವಾಹನ ಉತ್ಸವ, ದಿನಾಂಕ 21ರ ಗುರುವಾರ ಅನ್ನ ಸಂತರ್ಪಣೆ, ದಿನಾಂಕ 22ರ ಶುಕ್ರವಾರ ಓಕುಳಿ ಉತ್ಸವ ಜರುಗಲಿದೆ.

### ರಂಜಾನ್ ರೋಜಾ ಟೈಮ್

ದಿ.: 17-03-2024, ಇಫ್ತಾರ್ ಸಮಯ : 6-42
ದಿ : 18-03-2024, ಸಹೇರಿ ಸಮಯ : 5-13

## ಇಂದು ಎಸ್ಸೆಸ್ಸೆಂ, ಪುಟ್ಟಣ್ಣ ಅವರಿಗೆ ಸನ್ಮಾನ

ದಾವಣಗೆರೆ, ಮಾ. 16- ಡಿ.ಟಿ. ಶ್ರೀನಿವಾಸ್ ಅಭಿಮಾನಿ ಬಳಗದ ಜಿಲ್ಲಾ ಘಟಕದ ವತಿಯಿಂದ ನಾಳೆ ದಿನಾಂಕ 17 ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ನಗರದ ಬಿಐಇಟಿ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಭವನದಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಜಿಲ್ಲಾಧ್ಯಕ್ಷ ಎಸ್. ಪ್ರದೀಪ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಡಿ.ಜಿ. ಶಾಂತನಗೌಡ, ಕೆ.ಎಸ್. ಬಸವಂತಪ್ಪ, ಶಿವಗಂಗಾ ಬಸವರಾಜ್, ಬಿ. ದೇವೇಂದ್ರಪ್ಪ, ಎಸ್.ಎಸ್. ಕೇರ್ ಟ್ರಸ್ಟ್ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್, ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಗೌರವಾಧ್ಯಕ್ಷ ತಿಮ್ಮಯ್ಯ ಪುರ್ಲೆ ಸೇರಿದಂತೆ ಅನೇಕ ಗಣ್ಯರು ಆಗಮಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಪದವಿ, ಪದವಿ ಪೂರ್ವ ಕಾಲೇಜುಗಳ ಒಂದು ಸಾವಿರ ಉಪನ್ಯಾಸಕರುಗಳಿಗೆ ಸಂವಾದ ಏರ್ಪಡಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ವೀರೇಶ್, ದಿನೇಶ್ ಕೆ. ಶೆಟ್ಟಿ ಉಪಸ್ಥಿತರಿದ್ದರು.


**ಬೇಕಾಗಿದ್ದಾರೆ**

ಚಿಗುರು ಸಂಸ್ಥೆ ಅಡಿಯಲ್ಲಿ 3 ಗ್ರಾಮಗಳಲ್ಲಿ ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ಶಾಲೆಗಳು 9 ನೇ ವರ್ಷ ನಡೆಯುತ್ತಿದ್ದು 2024-25 ನೇ ಸಾಲಿಗೆ ಹಿರೇಮೇಗಳಗೆರೆ, ಹದಡಿ ಮತ್ತು ಕಡರನಾಯಕನಹಳ್ಳಿ ಇಲ್ಲಿ ಕಾರ್ಯ ನಿರ್ವಹಿಸಲು ಉತ್ತಮ ಆಸಕ್ತಿ ಜೊತೆಗೆ ಇಂಗ್ಲಿಷ್ ಸಂವಹನ, ಉತ್ತಮ ಚಟುವಟಿಕೆ ಸಹಿತ ಸ್ವ ಆಸಕ್ತಿ ಇಂದ ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಇಚ್ಚೆ ಉಳ್ಳ ಶಿಕ್ಷಕಿಯರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುತ್ತದೆ.

ಅರ್ಹತೆ : B. Ed. B. Sc. B.Ed. Engineering. Diploma
Any Degree with good knowledge

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : +91 97426 01067
+91 83107 38850, +91 94832 19365



**SREE DEVI TILES & STONES PRIVATE LTD.,**

**VACANCY**

A Well known Tiles and Granites Showroom has below Vacancies for experienced Candidates

* Store Manager - 1
* Accountant (M/F) - 3
* Sales Manager (M/F) - 5
* Receptionist (Female) - 2
* Sales Executive (M/F) - 10
* Marketing Executive (M/F)-5

Walking Interview on 17.03.2024 Sunday at 10.30 am

# 2023 Vidya Nagar, NH4, Shamanur Service Road, Near Anand P.U College, Davangere-3.

Contact : 94482 71987, 96118 98622



**ಹಣ ಉಳಿತಾಯ ಮಾಡಿ ಚಿನ್ನ-ಬೆಳ್ಳಿ ನಿಮ್ಮದಾಗಿಸಿಕೊಳ್ಳಿ... !**

ಪ್ರತಿ ತಿಂಗಳು ಹಣ ಉಳಿತಾಯ ಮಾಡುವುದರ ಮೂಲಕ ಚಿನ್ನ - ಬೆಳ್ಳಿ ಖರೀದಿಯ ಕನಸನ್ನು ನನಸಾಗಿಸಿಕೊಳ್ಳಿ.
ಪ್ರತಿ ತಿಂಗಳು ರೂ. 500/- ರಿಂದ ರೂ. 8,000/-ವರೆಗೆ ಕಂತಿನ ಹಣವನ್ನು 11 ತಿಂಗಳು ಕಟ್ಟಿದ್ದಲ್ಲಿ 1 ತಿಂಗಳ ಬೋನಸ್ ಸೇರಿ, 12 ತಿಂಗಳ ನಂತರ ಆ ಮೌಲ್ಯಕ್ಕೆ ತಕ್ಕಂತೆ ಬೆಳ್ಳಿ ಅಥವಾ ಬಂಗಾರದ ಆಭರಣವನ್ನು ಕೊಡಲಾಗುವುದು.

ವಿವರಗಳಿಗಾಗಿ ಸಂಪರ್ಕಿಸಿ :
ಪಾಂಡುರಂಗ ಬೊಮ್ಮಯ್ಯ ವೆರ್ಣೇಕರ್
(ಪಾಂಡುರಂಗಪ್ಪನವರ ಬೆಳ್ಳಿ-ಬಂಗಾರದ ಅಂಗಡಿ)
#18, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ - 577001.
ದೂರವಾಣಿ : 99728-75535, 96322-76593



SMT

**ಕುರಿಗಳು ಮಾರಾಟಕ್ಕಿವೆ ಮತ್ತಿ ಕ್ಯಾಂಪ್**



ಸಾಕಿದ ಜವಾರಿ ಕುರಿಗಳು ಮಾರಾಟಕ್ಕಿವೆ.
ಮಾಂಸ ಸರಬರಾಜು ಸಹ ಇರುತ್ತದೆ
ಸ್ಥಳ: ಮತ್ತಿ ಕ್ಯಾಂಪ್, ಚನ್ನಗಿರಿ ರೋಡ್, ದಾವಣಗೆರೆ ತಾ|| ಜಿ||
ಸಂಪರ್ಕಿಸಿ : 94487 89359, 99027 99995



ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ www.hindusmatrimony.com

SGM Tours **ಎಸ್‌ಜಿಎಂ ಟೂರ್ಸ್**

ಬಾಣಾಪುರಮಠ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ

14 ದಿನಗಳು **ಚಾರ್‌ಧಾಮ್ ವಿಶೇಷ ಯಾತ್ರೆ** ಮೇ 2024 ರಿಂದ
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ)
ಸಂದರ್ಶಿಸುವ ಸ್ಥಳಗಳು : ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.

**ಕಾಶಿ ಯಾತ್ರೆ**
ಸಂದರ್ಶಿಸುವ ಸ್ಥಳಗಳು : ಕಾಶಿ, ಅಯೋಧ್ಯ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್,

**ಅಮರ್‌ನಾಥ, ವೈಷ್ಣೋದೇವಿ ವಿಶೇಷ ಪ್ರವಾಸ** 4 ಜುಲೈ 2024 ರಿಂದ 9 ದಿನಗಳು
ಸಂದರ್ಶಿಸುವ ಸ್ಥಳಗಳು : ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್
ಸಂಚಾಲಕರು : ವೇ|| ಲೋಕೇಶಯ್ಯ ಎಂ.
78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ





## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ದಾವಣಗೆರೆ ಹೋಮಿಯೋಪಥಿ ವೈದ್ಯಕೀಯ ಸಂಘ ಹಾಗೂ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಟ್ರಸ್ಟ್ ಸಭಾಂಗಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ.ಡಾ. ಮಾವಿ ಶೆಟ್ಟರ್, ಡಾ. ಶರತ್‌ರಾಜ್ ಕೆ. ಆರ್., ಡಾ. ಸಿ.ಎನ್. ಕೋಟಿಹಾಳ್, ಡಾ.ಎ.ಎನ್. ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ.ಎಸ್. ಗಿರೀಶ್, ಡಾ. ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್. ರಂಗರಾಜನ್ ತಪಾಸಣಾ ತಂಡದಲ್ಲಿದ್ದಾರೆ.

## ನಗರದಲ್ಲಿ ಇಂದು 'ಶಿವರಾತ್ರಿ' ಪ್ರವಚನ

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಡಾಲರ್ಸ್ ಕಾಲೋನಿಯ ವರ್ಣದಲ್ಲಿ ಇಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರ ವರೆಗೆ ಮಹಾ ಶಿವರಾತ್ರಿ ಕಾರ್ಯಕ್ರಮ ಪ್ರಯುಕ್ತ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿಯವರಿಂದ ಪ್ರವಚನ ನಡೆಯಲಿದೆ.

## ಸಬ್ ಜ್ಯೂನಿಯರ್ ಕಬಡ್ಡಿಗೆ ದರ್ಶನ್




ದಾವಣಗೆರೆ, ಮಾ. 16 - ಬಿಹಾರದಲ್ಲಿ ನಡೆಯಲಿರುವ 33ನೇ ರಾಷ್ಟ್ರೀಯ ಬಾಲಕರ ಸಬ್ ಜ್ಯೂನಿಯರ್ ಕರ್ನಾಟಕ ಕಬಡ್ಡಿ ತಂಡಕ್ಕೆ ನಗರದ ಗಾಂಧಿನಗರದ ಶ್ರೀ ದುರ್ಗಾ ತಂಡದ ಕ್ರೀಡಾಪಟು ದರ್ಶನ್ ಆಯ್ಕೆಯಾಗಿರುತ್ತಾರೆ. ದರ್ಶನ್ ಅವರಿಗೆ ದಾವಣಗೆರೆ ಜಿಲ್ಲಾ ಅಮೇಚೂರ್ ಕಬಡ್ಡಿ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ, ಎಲ್ಲಾ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.







## ಶರಣ ಮೊತ್ತಲಕಟ್ಟೆ ಕಲ್ಲೇಶಪ್ಪ ಸಿದ್ದನೂರು ನಿಧನ



ದಾವಣಗೆರೆ ತಾಲ್ಲೂಕು, ಜಿ||, ಆವರಗೆರೆ ವಾಸಿ

ಶರಣ ದಿ|| ಸಿದ್ದಪ್ಪನವರ ಮಗ

**ಶರಣ ಮೊತ್ತಲಕಟ್ಟೆ ಕಲ್ಲೇಶಪ್ಪ (ಸಿದ್ದನೂರು)**

(75 ವರ್ಷ) ರೈತ ಮುಖಂಡರು ಹಾಗೂ ಜಮೀನ್ದಾರರು.

ಇವರು ದಿನಾಂಕ : 16.03.2024ರ ಬೆಳಿಗ್ಗೆ 9.30 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ, 3 ಜನ ಗಂಡು ಮಕ್ಕಳು, ನಾಲ್ಕು ಜನ ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 17.03.2024 ರ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಆವರಗೆರೆಯ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗದವರು

ಫೋನ್ : 89705 63001












KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas